ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇದರಲ್ಲಿ ತಮಗೆ ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ. ನೀವು ಮಾಡಿದ್ದನ್ನು ನಾವು ರೆಗ್ಯುಲರೈಸ್ ಮಾಡಿ ತಂದಿದ್ದೇವೆ ಇದರೊಳಗೆ ಒಂದೆರಡು ತಿದ್ದುಪಡಿಗಳನ್ನು ಅಫಿಶಿಯಲ್ ಆಗಿ.........

ಶ್ರೀ ಆರ್. ವಿ. ದೇಶಪಾಂಡೆ :– ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಕೆಲವು ಸೂಚನೆಗಳನ್ನು ನಾವು ಕೊಡಬೇಕಾದರೆ ಇದನ್ನು ನೋಡಬೇಕಾಗುತ್ತದೆ. ಎರಡು–ಮೂರು ಗಂಟೆಗಳಿಂದ ಪ್ರತಿ ನಮಗೆ ಸಿಕ್ಕಿಲ್ಲ. **We are not getting the copy.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇದರ ಮಂಡನೆ ಹೋದ ಸಲವೇ ಆಗಿದೆ.

ಶ್ರೀ ಆರ್. ವಿ. ದೇಶಪಾಂಡೆ :– ನೀವು ಇನ್‌ಸಿಸ್ಟ್ ಮಾಡಿದರೆ ನಾವು ಯಾರೂ ಮಾತನಾಡುವುದಕ್ಕೆ ನಮಗೆ ಶಕ್ತಿ ಇಲ್ಲ. **But I should know what I am saying.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನೀವು ಹೇಳಿದ್ದನ್ನು ನಾವು ಮಾಡಿದ ಮೇಲೆ ನಿಮಗೆ ಶಕ್ತಿ ಎಲ್ಲಿಂದ ಬರುತ್ತದೆ. ?

ಉಪಾಧ್ಯಕ್ಷರು :– ನಾಳೆ ಬೇರೆ ವಿಷಯಗಳು ಇರುವುದರಿಂದ ಇವತ್ತೇ ಮುಗಿಸಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ :– ಇದರಲ್ಲಿ ಮಾತನಾಡುವವರು ಆ ಕಡೆಯವರೂ ಇರಬಹುದು. ಈ ಕಡೆಯವರೂ ಇರಬಹುದು. ಆದ್ದರಿಂದ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನ್ನು ತೆಗೆದುಕೊಂಡು ಮುಗಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಶ್ರೀ ಅಜೀಜ್‌ಸೇಠ್ ಅವರು ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ :– ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನಲ್ಲಿ ಏನೇನೂ ಇಲ್ಲ.......

ಉಪಾಧ್ಯಕ್ಷರು :– ಆ ಕಡೆ ಎಷ್ಟು ಜನ ಮಾತನಾಡುವವರು ಇದ್ದಾರೆ ?

Shi R. V. Deshpande : Madam, it is not a good precedent because it should start from this side...

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಶ್ರೀ ದೇಶಪಾಂಡೆಯವರ ಸಲಹೆಯನ್ನು ಅನುಮೋದನೆ ಮಾಡುತ್ತಾ ನಾನು ಹೇಳುತ್ತಿದ್ದೇನೆ. ಏಕೆಂದರೆ, ಇದು ಸಾಧಾರಣವಾದಂಥ ಮಸೂದೆ ಅಲ್ಲ. ನಮ್ಮ ಹಳ್ಳಿಗಾಡಿನಲ್ಲಿರತಕ್ಕಂಥ ಜನಾ ಬದುಕಿನ ಹಕ್ಕಿಗೆ ನೇರವಾಗಿ ಸಂಬಂಧ ಪಟ್ಟಿರತಕ್ಕಂಥ ಪ್ರಶ್ನೆ.

ನಮಗೆ ಆರ್ಟಿಕಲ್ 21 ದೊರಕುತ್ತಾ ಇಲ್ಲ. ಆದ್ದರಿಂದ ದಯಮಾಡಿ ಕಂದಾಯ ಮಂತ್ರಿಗಳು ಇದರ ಬಗ್ಗೆ ಅವಸರ ಮಾಡಬಾರದು. ನಾಳೆ ದಿವಸ ವಿವರವಾಗಿ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

ಉಪಾಧ್ಯಕ್ಷರು :– ಈ ಕಡೆಯಿಂದ ಕೆಲವಾರು ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ :– ಈ ಬಿಲ್ಲಿನಿಂದ ಬಡವರಿಗೆ, ಭೂಹೀನರಿಗೆ ಸಹಾಯವಾಗುತ್ತದೆ. ಆದರೆ ಯಾವ ಪ್ರಕಾರ ಆಗಬೇಕು ಎಂಬ ಬಗ್ಗೆ ಈ ಮನೆಯಲ್ಲಿ ನಮ್ಮ ಅಭಿಪ್ರಾಯವನ್ನು ಹೇಳಬೇಕು. ಆದ್ದರಿಂದ ಸ್ವಲ್ಪ ಸಮಯ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈ ಮಸೂದೆಯನ್ನು ಇಂಟ್ರಡ್ಯೂಸ್ ಮಾಡಿ ಸಾಕಷ್ಟು ದಿವಸಗಳಾಗಿದೆ. ಈಗಾಗಲೇ ಸಾಕಷ್ಟು ಕಾಲಾವಕಾಶ ಕೊಟ್ಟಿದ್ದೇವೆ. ಇದು ಅಗ್ರೀಡ್ ಬಿಲ್, ಇದನ್ನು ಎಲ್ಲರೂ ಒಪ್ಪಿದ್ದಾರೆ. ತಾವು ಇವತ್ತೇ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ.

ಉಪಾಧ್ಯಕ್ಷರು :– ಆಯಿತು, ಇದನ್ನು ನಾಳೆ ದಿವಸ ತೆಗೆದುಕೊಳ್ಳೋಣ.

1) 1990 ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕ,

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೇ, 1990ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ ಈ ಬಿಲ್, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ರಿಸರ್ವೇಷನ್ ಮತ್ತು ಅಪಾಯಿಂಟ್‌ಮೆಂಟ್ ಸಲುವಾಗಿ ಸರ್ಕಾರ ತಂದಿದೆ. ಬಹಳಷ್ಟು ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮುಖಂಡರು, ಬ್ಯಾಕ್‌ವರ್ಡ್‌ಕ್ಲಾಸ್ ಮುಖಂಡರು, ದಲಿತ ಸಂಘರ್ಷ ಸಮಿತಿ ಮುಖಂಡರು ಹಾಗೂ ಇನ್ನಿತರ ಸಂಸ್ಥೆಗಳಿಂದ ಈ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಬ್ಯಾಕ್‌ವರ್ಡ್‌ಕ್ಲಾಸ್ ಜನಾಂಗದ ಅಪಾಯಿಂಟ್‌ಮೆಂಟ್ ಬಗ್ಗೆ ಯಾವುದೇ ಪ್ರಕಾರದ ಕಾರ್ಯಕ್ರಮ ಆಗುತ್ತಾ ಇಲ್ಲವೆಂದು ಒತ್ತಾಯ ಬಂದಿತು. ಇದರ ಬಗ್ಗೆ ಸರ್ಕಾರ ವಿಚಾರ ಮಾಡಿ, ಒಂದು ಸ್ಟ್ಯಾಟ್ಯುಟರಿ ಬಿಲ್ ತಂದಿದೆ. ಈ ಎಸ್.ಸಿ. ಎಸ್‌ಟಿ ಮತ್ತು ಬ್ಯಾಕ್ ವರ್ಡ್‌ಕ್ಲಾಸ್ ಜನರಿಗೆ ಆಗುವಂಥ ಅನ್ಯಾಯ ಎನ್ನಬಹುದು, ಈ ಜನರ ಅಪಾಯಿಂಟ್‌ಮೆಂಟ್ ಸಲುವಾಗಿ ತೊಂದರೆ ಇರಬಹುದು, ಮತ್ತಿತರ ನಾನಾ ರೀತಿಯಲ್ಲಿ ತೊಂದರೆ ಇರಬಹುದು. ಇವುಗಳ ಬಗ್ಗೆ ದೂರುಗಳು ಮತ್ತು ಕ್ರಿಟಿಸಿಸಂ ಬಂದಿತ್ತು. ಅದಕ್ಕಾಗಿ ಈ ಬಿಲ್ಲನ್ನು ತರಲಾಗಿದೆ. ಈ ಬಿಲ್ ಬಗ್ಗೆ ಹೇಳಬೇಕಾದರೆ ಮೊದಲನೆಯದಾಗಿ,

Scheduled castes, scheduled tribes and other Backward classes in the State Civil services and establishments in the public sector and in admission to Universities and to the educational institutions estabilshed or maintained or aided by the State Government.

ಇಂತಹ ಎಲ್ಲಾ ಸಂಸ್ಥೆಗಳವರ ಅಭಿಪ್ರಾಯದ ಮೇರೆಗೆ, ಎಸ್‌ಸಿ., ಎಸ್‌ಟಿ. ಯವರ ರಿಸರ್ವೇಷನ್ ಸೀಟುಗಳ ಸಲುವಾಗಿ, ಪ್ರತ್ಯೇಕವಾಗಿ ಸೀಟುಗಳನ್ನು ತೆಗೆದಿಟ್ಟು ಇವರನ್ನು ಅಪಾಯಿಂಟ್ ಮಾಡಬೇಕೆಂಬ ವಿಚಾರದಿಂದ ಈ ಬಿಲ್‌ನ್ನು ತಂದಿದ್ದೇವೆ. ಅದೇ ಪ್ರಕಾರ ಭಾರತೀಯ ಸಂವಿಧಾನ ಸಂಹಿತೆ 341 ರ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟಿಗೆ ಎಷ್ಟು ರಿಸರ್ವೇಷನ್ ಕೊಡಬೇಕು. ಆರ್ಟಿಕಲ್ 342 ರ ಪ್ರಕಾರ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಯಾವ ಪ್ರಕಾರ ಕೊಡಬೇಕು, ಅದೇ ಪ್ರಕಾರ, ಬ್ಯಾಕ್‌ವರ್ಡ್ ಕ್ಯಾಸ್ಟಿನವರಿಗೆ ಆರ್ಟಿಕಲ್ 15 (4) ಮತ್ತು 16(4)ರ ಪ್ರಕಾರ ರಿಸರ್ವೇಷನ್ ಸೀಟುಗಳನ್ನು ಇಟ್ಟು, ಅವರಿಗೆ ಪ್ರೊಟೆಕ್ಷನ್ ಕೊಡುವ ಸಲುವಾಗಿ, ಈ ಸ್ಟ್ಯಾಟ್ಯುಟರಿ ಬಿಲ್ಲನ್ನು ತಂದಿದ್ದೇವೆ. ಇದರಲ್ಲಿ ಒಂದು ಸ್ಟಾಂಡಿಂಗ್ ಕಮಿಟಿಯನ್ನು ನಾವು ಸಲಹೆ ಮಾಡಿದ್ದೇವೆ. ಇದರಲ್ಲಿ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು ಚೇರಮನ್ ಆಗಿರುತ್ತಾರೆ, ಶಾಸನ ಸಭೆಯ 5 ಜನ ಸದಸ್ಯರು, ಈ ಕಮಿಟಿಯ ಸದಸ್ಯರಾಗಿರುತ್ತಾರೆ. ಚೀಫ್ ಸೆಕ್ರೆಟರಿ ಸದಸ್ಯರಾಗಿರುತ್ತಾರೆ. ಹೋಮ್ ಸೆಕ್ರೆಟರಿಯವರೂ ಕೂಡ ಈ ಕಮಿಟಿ ಸದಸ್ಯರಾಗಿರುತ್ತಾರೆ. ಸೋಷಿಯಲ್ ವೆಲ್‌ಫೇರ್ ಮತ್ತು ಲೇಬರ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವರು, ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಯಾವ ಪ್ರಕಾರ ಎಸ್‌ಸಿ. ಎಸ್‌ಟಿ ಮತ್ತು ಬ್ಯಾಕ್-ವರ್ಡ್ ಕ್ಲಾಸ್‌ನವರನ್ನು, ಯಾವ ಯಾವ ಹುದ್ದೆಗಳಲ್ಲಿ ನಿಯಮದ ಪ್ರಕಾರ ತುಂಬಿದ್ದಾರೆ. ರಿಸರ್ವೇಷನ್ ಪ್ರಕಾರ ಸಂಪೂರ್ಣವಾಗಿ ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ರಿವ್ಯೂ ಮಾಡುತ್ತಾರೆ. ಇದು ಇಂಪ್ಲಿಮೆಂಟ್ ಆಗುವ ಒಂದು ಯೋಜನೆಯನ್ನು ನಮ್ಮ ಸರ್ಕಾರದಲ್ಲಿ ಹಾಕಿಕೊಂಡಿದ್ದೇವೆ. ಆ ಪ್ರಕಾರ ಈ ಬಿಲ್‌ನಲ್ಲಿ ಯಾವ ಅಧಿಕಾರಿಗಳು ಷೆಡ್ಯೂಲ್ಡ್ ಕ್ಯಾಸ್ಟ್ ಅಪಾಯಿಂಟ್‌ಮೆಂಟ್ ಒಂದಂಥ ಕಾಲಕ್ಕೆ ಅಡ್ವರಟೈಸ್‌ಮೆಂಟ್ ಮಾಡದೆ ಬ್ಯಾಕ್‌ಲಾಗ್ ಫಿಲಪ್ ಮಾಡದೇ ಇದ್ದಲ್ಲಿ ಅವರ ಮೇಲೆ ಪೆನಾಲ್ಟಿ ಕ್ಲಾಸ್ ಹಾಕಿದ್ದೇವೆ. ಇದಕ್ಕೆ ಒಂದು ಸಾವಿರ ರೂಪಾಯಿ ಪೆನಾಲ್ಟಿ ಹಾಗೂ imprisonment not exceeding Six months ಇರುವಂತಹ ಒಂದು ಪೆನಾಲ್ಟಿ ಕ್ಲಾಸ್ ಹಾಕಿದ್ದೇವೆ. ಈ ಪ್ರಕಾರ ನಾವು ಪರಿಶಿಷ್ಟ ವರ್ಗಗಳವರಿಗೆ ಜಾತಿಯವರಿಗೆ ಹಿಂದುಳಿದ ವರ್ಗದವರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

No prosecution for an offence under this Act shall be instituted except by or with the sanction off the State Government,

ಯಾವುದೇ ಪ್ರಾಸಿಕ್ಯೂಷನ್‌ನ್ನು ಸ್ಟೇಟ್ ಗೌರ್ನಮೆಂಟ್ ಸ್ಯಾಂಕ್ಷನ್ ತೆಗೆದುಕೊಂಡು ಮಾಡಬೇಕೆಂದು ಮಾಡಿದ್ದೇವೆ.

Maintenance of records and submission of annual reports etc.,

ಇದರಲ್ಲಿ ಎಸ್‌ಸಿ., ಎಸ್‌ಟಿ. ಮತ್ತು ಬ್ಯಾಕ್‌ವರ್ಡ್‌ಕ್ಲಾಸಸ್‌ನ ಎಷ್ಟು ಜಾಗಗಳು ಖಾಲಿ ಆದವು, ಎಷ್ಟು ಜನ ಎಸ್.ಸಿ., ಎಸ್.ಟಿ. ಮತ್ತು ಬ್ಯಾಕ್‌ವರ್ಡ್‌ಕ್ಲಾಸಸ್ ಅಭ್ಯರ್ಥಿಗಳು ಅಪಾಯಿಂಟ್‌ಮೆಂಟ್ ಆದರು ಎಂಬ ಬಗ್ಗೆ ರೆಕಾರ್ಡ್ಸ್ ಮೇಂಟೆನೆನ್ಸ್ ಮಾಡಬೇಕಾಗುತ್ತದೆ. ಈ ರೆಕಾರ್ಡ್ಸ್ ಗಳನ್ನು ಯಾವಾಗ ಕೇಳಿದರೂ ಒದಗಿಸಿಕೊಡಬೇಕೆಂಬ ಡ್ಯೂಟಿ ಇಂಪೋಸ್ ಮಾಡಿದ್ದೇವೆ. ಅದೇ ಪ್ರಕಾರವಾಗಿ ಅವರು ಆನ್ಯುಯಲ್ ರಿಪೋರ್ಟ್ಸ್ ಕೂಡ ಕೊಡಬೇಕು. ಈ ರಿಪೋರ್ಟ್‌ನ್ನು ಇಂಪ್ಲಿಮೆಂಟೇಷನ್ ಕಮಿಟಿಯವರು ರಿವ್ಯೂ ಮಾಡಿದ ನಂತರ ಅದನ್ನು ಅಸೆಂಬ್ಲಿಯ ಮುಂದೆ ಇಟ್ಟು ಅಸೆಂಬ್ಲಿಯ ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಸ್.ಸಿ ಎಸ್‌ಟಿ

ಮತ್ತು ಬ್ಯಾಕ್‌ವರ್ಡ್‌ಕ್ಲಾಸಸ್ ರಿಸರ್ವೇಷನ್‌ನ್ನು ಅವರಿಗೆ ಸರಿಯಾಗಿ ಒದಗಿಸಿಕೊಡುವ ಸಲುವಾಗಿ ಹಾಗೂ ಅವರ ಹಕ್ಕುಗಳನ್ನು ರಕ್ಷಣೆ ಮಾಡುವ ಸಲುವಾಗಿ ಈ ಕಾನೂನನ್ನು ಸರಕಾರ ತಂದಿದ್ದು ಇದಕ್ಕೆ ತಾವು ದಯ ವಿಟ್ಟು ಒಪ್ಪಿಗೆಯನ್ನು ಕೊಡಬೇಕೆಂದು ಹೇಳುತ್ತೇನೆ.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ) :– ಮಾನ್ಯ ಸಭಾಧ್ಯಕ್ಷರೇ ಸೆಕ್ಷನ್ 8ರಲ್ಲಿ ಒಂದು ತಿದ್ದುಪಡಿಯನ್ನು ಸೂಚನೆ ಮಾಡುತ್ತೇನೆ. ಇದಕ್ಕೆ ತಮ್ಮ ಅಭ್ಯಂತರವೂ ಏನೂ ಇರುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಸ್ಥಾಯಿ ಸಮಿತಿ ರಚನೆ ಬಗ್ಗೆ ಸೆಕ್ಷನ್ 8 (ಬಿ) ಯಲ್ಲಿ ಹೇಳಿದ ಪ್ರಕಾರ 'ವಿಧಾನಸಭಾ ಅಧ್ಯಕ್ಷರು' ನಿರ್ಧರಿಸಬಹುದಾದ, ಅಂತಹ ರೀತಿಯಲ್ಲಿ ಚುನಾಯಿಸುವ ಕರ್ನಾಟಕ "ವಿಧಾನಸಭೆಯ ಐದು ಜನ ಸದಸ್ಯರು" ಎಂದು ಇದೆ ನನ್ನ ಅನುಭವದಲ್ಲಿ [illegible] ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನವರು ಆದರೆ ಒಳ್ಳೆಯದು. ಆಗ ಒಂದು ಸ್ವಲ್ಪವೂ ಅನುಮಾನ ಬಾರದ ರೀತಿ ಕೆಲಸ ಆಗುತ್ತದೆ. ಎಂದು ನನ್ನ ಅಭಿಪ್ರಾಯ. ಈ ತಿದ್ದುಪಡಿಯನ್ನು ತಾವು ಸ್ವೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ :- (ಕನಕಪುರ) ಸನ್ಮಾನ್ಯ ಉಪಾಧ್ಯಕ್ಷರೇ ಇವತ್ತು ನಮ್ಮ ಮಾನ್ಯ ಮಂತ್ರಿಗಳು ಪರಿಶಿಷ್ಟ ಜಾತಿಯವರು, ಪರಿಶಿಷ್ಟ ವರ್ಗದವರು ಹಾಗೂ ಹಿಂದುಳಿದವರಿಗೆ ಸರ್ಕಾರಿ ನೌಕರಿಯಲ್ಲಿ ಕೆಲಸವನ್ನು ರಿಸರ್ವೇಷನ್ ಮಾಡುವುದರ ಬಗ್ಗೆ ಈ ಒಂದು ಮಸೂದೆಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇದರ ಜೊತೆಗೆ ಸರಕಾರದಲ್ಲಿರತಕ್ಕಂಥ ವಿವಿಧ ಇಲಾಖೆಗಳಲ್ಲಿ ಈ ವರ್ಗದ ಜನಗಳಿಗೆ ನೌಕರಿ ಬಗ್ಗೆ ನ್ಯಾಯ ಸಿಗುತ್ತಿ-ದೆಯೋ ಇಲ್ಲವೋ ಎಂಬ ವಿಚಾರವನ್ನು ಮಾಡುವುದಕ್ಕೆ ಸಂವಿಧಾನದ 356 ನೇ ನಿಯಮದ ಪ್ರಕಾರ ಅದನ್ನು ಪರಿಶೀಲನೆ ಮಾಡುವುದಕ್ಕೆ ಸಹ ಒಂದು ಪ್ರಸ್ತಾವವನ್ನು ಮಾಡಿದ್ದಾರೆ. ಇದರ ಅವಶ್ಯಕತೆ ನನಗೆ ಏನೂ ಕಂಡು ಬರುತ್ತಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಸರಕಾರಕ್ಕೆ ತಿಳಿಸಬಯಸುತ್ತೇನೆ. ಏತಕ್ಕೆಂದರೆ ಈಗಿರತಕ್ಕಂಥ ನಿಯಮಗಳ ಪ್ರಕಾರವಾಗಿಯೇ ಸರಕಾರದ ವಿವಿಧ ಇಲಾಖೆಗಳಲ್ಲಿ ಈ ವರ್ಗದ ಜನಗಳಿಗೆ ನ್ಯಾಯ ಒದಗಿಸಲಿಕ್ಕೆ ಆಗುತ್ತಿಲ್ಲ. ಇದು ನಿಮಗೂ ಗೊತ್ತಿರತಕ್ಕಂಥ ವಿಚಾರ. ಈಗಿರತಕ್ಕಂಥ ನಿಯಮಗಳನ್ನು ಕಾನೂನನ್ನು ಕಾರ್ಯಾಚರಣೆ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗದಿರತಕ್ಕಂಥ ಸಂದರ್ಭದಲ್ಲಿ ಮತ್ತೊಂದು ಕಾನೂನನ್ನು ಕೇವಲ ಪ್ರಚಾರಕ್ಕೋಸ್ಕರ ತಂದಿದ್ದೀರಿ ಎಂಬ ಸಂಶಯ ನನಗೆ ಬರುತ್ತಿದೆ. (4.45 ಪಿ.ಎಂ.) ಈಗ ತಾವೇ ಸಮಾಜ ಕಲ್ಯಾಣ ಇಲಾಖಾ ಸಚಿವರು ಇದ್ದೀರಿ. ಸರ್ಕಾರದ ವಿವಿಧ ಇಲಾಖೆಗಳಲ್ಲಿ 18 ಪರ್ಸೆಂಟ್ ಎಕ್ಸ್‌ಪೆಂಡೀಚರ್ ಮುನಿಸಿಪಾಲಿಟಿಗಳಲ್ಲಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ರಿವ್ಯೂ ಮಾಡುವುದಕ್ಕೆ ಅವಕಾಶ ಇದೆ. ಮಂಡಲ ಪಂಚಾಯತಿಗಳಲ್ಲಿ 10 ಪರ್ಸೆಂಟ್ ಹಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗದವರಿಗೆ ಖರ್ಚು ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ರಿವ್ಯೂ ಮಾಡುವ ಅಥಾರಿಟಿ ನಿಮಗೆ ಇದೆ. ಜಿಲ್ಲಾ ಪರಿಷತ್ತಿನಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಕೊಡತಕ್ಕಂಥ ಹಣ ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ರಿವ್ಯೂ ಮಾಡುವ ಅಧಿಕಾರ ಇದೆ. ಆದರೆ ಎಷ್ಟು ಜನರು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಗಳು ಕಳೆದ 40 ವರ್ಷಗಳಿಂದ ರಿವ್ಯೂ ಮಾಡಿದ್ದಾರೆ ? ಎಷ್ಟು ಅಧಿಕಾರಿಗಳಿಗೆ ಪನಿಷ್‌ಮೆಂಟ್ ಕೊಟ್ಟಿದ್ದೀರಿ ? ಅಥವಾ ಖರ್ಚು ಮಾಡದೆ ಇರುವಂತಹವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ? ಹಣ ದುರುಪಯೋಗವಾಗಿರತಕ್ಕಂಥ ಕಡೆ ಏನು ಮಾಡಿದ್ದೀರಿ ? ದಯಮಾಡಿ ಹೇಳಿ. ಇವತ್ತು ತಾವು ಈ ಒಂದು ಕಾನೂನು ತಂದು ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ನ್ಯಾಯವನ್ನು ಒದಗಿಸುತ್ತಿದ್ದೇವೆ ಎನ್ನುವ ಮಾತನ್ನು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ತಾವು ಮಸೂದೆ ತರತಕ್ಕಂಥ ಉದ್ದೇಶ ಸರಿಯಾಗಿ ಇರಬಹುದು. ಆದರೆ ಹಾಲಿ ಇರತಕ್ಕಂಥ ಕಾನೂನನ್ನು ಕಾರ್ಯಾಚರಣೆ ಮಾಡುವುದಕ್ಕೆ ಆಗುತ್ತಿಲ್ಲ. ಈಗ ತಾವು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿ ಒಂದು ವರ್ಷ ಆಯಿತು. ಮಧ್ಯದಲ್ಲಿ ಸ್ವಲ್ಪ ಸಮಯ ತಮಗೆ ರಜೆ ಕೊಟ್ಟಿದ್ದರು. ಒಂದು ವರ್ಷದ ಅವಧಿಯಲ್ಲಿ ಯಾವ ಯಾವ ಮುನಿಸಿಪಾಲಿಟಿಗಳಿಗೆ ಯಾವ ಯಾವ ಕಾರ್ಪೊರೇಷನ್‌ಗಳಿಗೆ ನೀವು ಭೇಟಿ ಕೊಟ್ಟು ರಿವ್ಯೂ ಮಾಡಿದ್ದೀರಿ. ಇದನ್ನು ದಯಮಾಡಿ ತಿಳಿಸಿ. ಇನ್ನು ಬೆಂಗಳೂರು ಯೂನಿವರ್ಸಿಟಿ ಇದೆ. ಅದರಂತೆ ನಮ್ಮ ರಾಜ್ಯದಲ್ಲಿ 6 ವಿಶ್ವವಿದ್ಯಾನಿಲಯಗಳು ಇವೆ. ಈ ವಿಶ್ವವಿದ್ಯಾನಿಲಯಗಳಲ್ಲಿರತಕ್ಕಂಥ ಅಪಾಯಿಂಟ್‌ಮೆಂಟ್ಸ್ ಇರಬಹುದು ಅಥವಾ ಬೇರೆ ಯಾವುದೇ ಇರಬಹುದು ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಿಂದುಳಿದ ವರ್ಗದವರಿಗೆ ಅನುಕೂಲ ಸಿಕ್ಕಿದೆ ಇದನ್ನು ತಾವೇನಾದರೂ ನೋಡಿದ್ದೀರಾ ? ಇವತ್ತು ನೀವು ಇಟ್ಟಿರತಕ್ಕಂಥ ಮಸೂದೆಯಲ್ಲಿ ಸಂವಿಧಾನದಲ್ಲಿ ಇರತಕ್ಕಂಥ ರೀತಿಯಲ್ಲಿ ಕಾರ್ಯಾಚರಣೆ ಮಾಡಲು ಮೀಸಲಾತಿ ಇಟ್ಟಿದ್ದೇವೆನ್ನುವ ಮಾತನ್ನು ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದವರು ಯಾರು ? ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ತಾವು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಹಿಂದಿನ ಮುಖ್ಯಮಂತ್ರಿಗಳು ಮೂರು ದಿವಸ ಆರು ದಿವಸ ಆರು ತಿಂಗಳು ಎಂದು ಹೇಳಿ 11 ತಿಂಗಳಿಗೆ ಅಧಿಕಾರ ಕಳೆದುಕೊಂಡು ಅವರು ಹೊರಟು ಹೋದರು. ಈಗ ಬೇರೆ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಿದ್ದಾರೆ. ಅವರು ಈಗ ಬೇರೆ ವಿಚಾರಕ್ಕೆ [illegible]. ಯಾರು ಹಿಂದುಳಿದ ವರ್ಗದವರು? ಇದನ್ನು ಮುಂಚಿತವಾಗಿ ತಾವು ಗುರುತಿಸಬೇಕು. ತಾವು ಈ ಮಸೂದೆಯನ್ನು ತಂದು ಕೇವಲ ಪ್ರಚಾರ ಪಡೆಯ

ಲಿಕ್ಕೆ ಹೊರಟಿದ್ದೀರೇ. ವಿನಹ ಇರತಕ್ಕಂಥ ಕಾನೂನುಗಳನ್ನು ಕಾರ್ಯಾಚರಣೆ ಮಾಡಿ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಿಲ್ಲ. ಏತಕ್ಕೆ ಆಗಿಲ್ಲ ಅದಕ್ಕೆ ಎರಡೂ ಕಡೆಯಿಂದ ಅಡ್ಡಿ ಆತಂಕಗಳು ಬರುತ್ತವೆ. ಅದು ಅಷ್ಟು ಸುಲಭದ ಕೆಲಸ ಅಲ್ಲ ಇವತ್ತು ವಿಶ್ವವಿದ್ಯಾನಿಲಯಗಳು ಶಿಕ್ಷಣ ಕೊಡತಕ್ಕಂಥ ಕೇಂದ್ರಗಳು ಆಗಬೇಕು ಆದರೆ ಅವು ಇವತ್ತು ಜಾತೀಯ ವಿಷ ಬೀಜಗಳನ್ನು ಸೃಷ್ಟಿಸತಕ್ಕಂಥ ಕೇಂದ್ರಗಳಾಗಿವೆ. ಜಾತೀಯ ಬೀಜ ಬಿತ್ತತಕ್ಕಂಥ ಕೇಂದ್ರಗಳಾಗುತ್ತಿವೆ. ಈ ವಿಶ್ವವಿದ್ಯಾನಿಲಯಗಳಲ್ಲಿರತಕ್ಕಂಥ ನಿಯಮಗಳ ಪ್ರಕಾರವಾಗಿ ತಾವು ಒಬ್ಬ ಕ್ಲಾಸ್ ಫೋರ್ ಹುದ್ದೆಯನ್ನು ಸಹ ತುಂಬಲಿಕ್ಕೆ ಆಗಿಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಇದು ಮೊದಲು ಮಾಡಲಿ. ನಿಮ್ಮ ಸರ್ಕಾರ ಹಿಂದುಳಿದ ವರ್ಗದವರ ಪರ ಇದ್ದೀರೋ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಪರ ಇದ್ದೀರೋ ಹೇಳಿ. ನೀವು ಏತಕ್ಕೆ ಅದನ್ನು ಮಾಡುತ್ತಿಲ್ಲ. ಈಗ ಎಜ್ಯುಕೇಶನ್ ಮಿನಿಸ್ಟರ್ ಕುಳಿತುಕೊಂಡು ಇದನ್ನು ರಿವ್ಯೂ ಮಾಡುವುದಕ್ಕೆ ಆಗುವುದಿಲ್ಲವೇ ? ಕಳೆದ ಲೋಕಸಭಾ ಚುನಾವಣೆಗಿಂತ ಹಿಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಇರತಕ್ಕಂಥ ಎಲ್ಲಾ ವೇಕೆನ್ಸಿಗಳನ್ನು ಈ ದೇಶದಲ್ಲಿ ಫಿಲಪ್ ಮಾಡುತ್ತೇವೆಂದು ಕೇಂದ್ರ ಸರ್ಕಾರದವರು ಒಂದು ಘೋಷಣೆ ಹೊರಡಿಸಿದರು. ಎಷ್ಟು ಜನರ ಅಪಾಯಿಂಟ್‌ಮೆಂಟ್ಸ್ ಆದವು ? ಇಲ್ಲಿ ಕೆಲವು ಸಮಯ ರಾಜ್ಯಪಾಲರ ಆಡಳಿತ ಇತ್ತು. ಆಗ ಎಲ್ಲಿ ಆಯಿತು ? ತಾವು ಕೇವಲ ಪ್ರಚಾರಕ್ಕಾಗಿ ರೇಡಿಯೋಗಳಲ್ಲಿ ಟಿ. ವ್ಹಿ. ಗಳಲ್ಲಿ ಪತ್ರಿಕೆಗಳಲ್ಲಿ ಪ್ರಚಾರಕ್ಕಾಗಿ ಘೋಷಣೆ ಮಾಡಿದಿರಿ. ಎಲ್ಲಿ ಅಪಾಯಿಂಟ್‌ಮೆಂಟ್ಸ್ ಆಯಿತು? ಆಗಲಿಲ್ಲ. ಎಲ್ಲೋ ಒಂದು ನಾಲ್ಕು ಕಡೆ ಆಗಿರಬಹುದಷ್ಟೇ. ದಯಮಾಡಿ ತಾವು ಅರ್ಥಮಾಡಿಕೊಳ್ಳಿ. ಈ ಮಸೂದೆ ತಂದು ನಿಮ್ಮ ಕೈಯಲ್ಲಿ ಇನ್ನೊಂದು ಅಸ್ತ್ರ ಇಟ್ಟುಕೊಂಡು ಕೇವಲ ಪ್ರಚಾರ ಮಾಡಲಿಕ್ಕೆ ಹೊರಟಿದ್ದೀರೆ ವಿನಹ ಇದರ ಉದ್ದೇಶ ಸಾಧನೆ ಮಾಡುವುದಕ್ಕೆ ಅಲ್ಲ. ಮತ್ತು ಇದನ್ನು ತುಂಬಾ ಅವಸರದಲ್ಲಿ ಮಾಡಿದ್ದೀರಿ. ಇದರಲ್ಲಿ ತಾವು ಏನು ಹೇಳಿದ್ದೀರಿ ಎಂದರೆ ಅದು ಈ ರೀತಿ ಇದೆ. "State Civil Services and Educational Institutions Established and maintained by State Government" What about Public Sector Undertakings ?

ಯಾವುದೇ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ತೆಗೆದುಕೊಳ್ಳಿ. ಗೌರ್ನಮೆಂಟಿನಿಂದ ಅಪಾಯಿಂಟ್‌ಮೆಂಟೆಲ್ಲಾ ಬ್ಯಾನ್ ಮಾಡಿದ್ದೇವೆಂದು ನಾವು ಆರ್ಡ್‌ರ್ ಮಾಡುತ್ತೇವೆ. ಅವರಿಗೆ ಬೇಕಾಗಿರುವವರಿಗೆ ಸತತವಾಗಿ ತೆಗೆದುಕೊಳ್ಳುತ್ತಲೇ ಇರುತ್ತಾರೆ. ರಾಜ್ಯದಲ್ಲಿರತಕ್ಕಂಥ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಎಷ್ಟು ಎಸ್.ಸಿ., ಎಸ್‌ಟಿ. ಕ್ಯಾಂಡಿಡೇಟ್ಸ್ ವೇಕೆನ್ಸೀಸ್ ಇವೆ ? ಅವುಗಳನ್ನು ಫಿಲಪ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ? ಅಥವಾ ಹಿಂದುಳಿದ ಜಾತಿಯವರಿಗೆ ಪ್ರಿಫರೆನ್ಸ್ ಕೊಡಲಿಕ್ಕೆ ಈಗಿರತಕ್ಕ ಕಾನೂನು ಪ್ರಕಾರವಾಗಿ ಏನು ಕ್ರಮ ತೆಗೆದುಕೊಂಡಿದ್ದಾರೆ ? ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿದ್ದು ಈಗ ಚೀಫ್ ಮಿನಿಸ್ಟರ್ ಸೆಕ್ರೆಟರಿಯಾಗಿದ್ದಾರೆ, ಈ ಆಫೀಸರ್ ಮೈಸೂರಿನ ವಿಕ್ರಾಂತ್ ಟೈರ್ ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಅಲ್ಲಿ ರೋಸ್ಟರ್ ಪ್ರಕಾರವಾಗಿ ರಿಕ್ರೂಟ್‌ಮೆಂಟ್ ಮಾಡಿದ್ದರೇ ? ತಮಿಳುನಾಡಿನಲ್ಲಿರತಕ್ಕಂಥ ಬೇಕಾದಷ್ಟು ಜನಕ್ಕೆ ಯಾವುದೇ ರೀತಿಯ ಅಪ್ಲಿಕೇಷನ್ ಇಲ್ಲ, ಇಂಟರ್‌ವ್ಯೂ ಇಲ್ಲ, ಮತ್ತೊಂದಿಲ್ಲ. ಅವರನ್ನು ಅಪಾಯಿಂಟ್ ಮಾಡಿಕೊಂಡರು. ಅವರನ್ನು ತೆಗೆದುಕೊಂಡು ಬಂದು ಚೀಫ್ ಮಿನಿಸ್ಟರ್ ಸೆಕ್ರೆಟರಿಯಾಗಿ ಮಾಡಿದ್ದೀರಿ. ಅವರ ಮೇಲೆ ಇದೇ ಹೌಸ್‌ನಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಸ್ಪೆಸಿಫಿಕ್ ಆಗಿ ಚಾರ್ಜ್‌ಸ್ ಮಾಡಿದ್ದೇನೆ. ವಿಕ್ರಾಂತ್ ಟೈರ್ ಫ್ಯಾಕ್ಟರಿ ಎರಡು ವರ್ಷದ ಹಿಂದೆ 80 ಕೋಟಿ ರೂಪಾಯಿ ಪ್ರಾಫಿಟ್ ಮಾಡುತ್ತಿತ್ತು. ಈಗ 30ಕೋಟಿ ರೂಪಾಯಿ ಲಾಸ್ ಆಗಿದೆ. ಇದಕ್ಕೆ ಈ ಅಧಿಕಾರಿಯೇ ಕಾರಣವೆನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಅವರ ಮೇಲೆ ನಿಮ್ಮ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಎಲ್ಲರಿಗೂ ಸಹಿತ ಗೊತ್ತಿರತಕ್ಕಂಥ ವಿಚಾರ ಇದು. ಯಾರು ಹಣವನ್ನು ತೆಗೆದುಕೊಂಡು ಹೋಗಿ ಕೊಡುತ್ತಾರೋ ಅವರಿಗೆ ರಿಕ್ರೂಟ್‌ಮೆಂಟ್ ಬೇಗ ಕೊಡುತ್ತಾರೆ. ಇಲ್ಲಿ ರೋಸ್ಟರ್ ಸಿಸ್ಟಮ್ ಇಂಪ್ಲಿಮೆಂಟ್ ಮಾಡಿದ್ದಾರೆಯೇ ? ಏಕೆ ವಿಕ್ರಾಂತ್ ಟೈರ್ ಫ್ಯಾಕ್ಟರಿ ಲಾಸ್ ಆಗಿದೆ ? ತಾವು ಇವತ್ತು ಕೆ.ಎಸ್.ಆರ್.ಟಿ.ಸಿ. ಮಂತ್ರಿಯಾಗಿದ್ದೀರಿ. ನನಗೆ ಗೊತ್ತಿರುವ ಹಾಗೆ ನೀವು ಒಂದು ಸಾರಿ ಇದನ್ನು ರಿವ್ಯೂ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಾ ? ಶೆಡ್ಯೂಲ್ಡ್ ಕ್ಯಾಸ್ಟ್. ಶೆಡ್ಯೂಲ್ಡ್ ಟ್ರೈಬ್‌ನಲ್ಲಿ ಎಷ್ಟು ಜನಕ್ಕೆ ಅಲ್ಲಿ ಕೆಲಸ ಸಿಕ್ಕಿದೆಯೆಂದು ರಿವ್ಯೂ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಿ ? ಇನ್ನು ಫಿಲಪ್ ಮಾಡುವುದಕ್ಕೆ ಅನೌನ್ಸ್ ಮಾಡಬೇಕೆಂದು ಹೇಳಿದಾಗ ಬೇಡವೆಂದು ಬರುತ್ತಾರೆ. ಅದರಿಂದ. ಈಗಿರತಕ್ಕಂಥ ಕಾನೂನು ನಿಮಗೆ ಸಾಕಾಗಿದೆ. ಇದರಿಂದಲೇ ನೀವು ರಿವ್ಯೂ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳಿ ಮತ್ತೆ ಹೊಸ ಕಾನೂನನ್ನು ಮಾಡಿಕೊಂಡು ಕೇವಲ ಪ್ರಚಾರಕ್ಕೋಸ್ಕರ ಹಿಂದುಳಿದ ಜಾತಿಯವರಿಗೆ ಅಥವಾ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ನಾವು ಸಹಾಯ ಮಾಡುತ್ತೇವೆಂದು ಹೇಳಿದರೆ ಏನೂ ಉಪಯೋಗವಾಗುವುದಿಲ್ಲ. ಇದರ ಉದ್ದೇಶ ಸರಿ ಇರಬಹುದು. ಆದರೆ ನೀವು ಏನು ಮಾಡಬೇಕೆಂದು ಹೊರಟಿದ್ದೀರೋ, ಅದು ಆಗುವುದಿಲ್ಲ. ಅದಷ್ಟೇ ಅಲ್ಲ, ಇನ್ನೂ ಒಂದು ಏನು ಹೇಳಿದ್ದೀರಿ, **Educational institutions established and maintained or aided by the State Government.**

ಏಡೆಡ್ ಇನ್ಸ್ಟಿಟ್ಯೂಷನ್ ಇದರಲ್ಲಿ ಸೇರಿಸಬೇಕಾಗಿತ್ತು. ಸೇರಿಸಿದ್ದರೆ ಸಂತೋಷ. ನಾನು ಇದನ್ನು ಓದಿದ್ದೇನೆ. ಓದದೇ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಎಲ್ಲಾ ವ್ಯವಹಾರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಅವುಗಳನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡಿ ಅನೇಕ ಸಂದರ್ಭಗಳಲ್ಲಿ ರಾಜಕೀಯವಾಗಿಯೂ ಸಹಿತ ನಾನು ಒದೆಗಳನ್ನು ಹೊಡೆತಗಳನ್ನು ತಿಂದಿದ್ದೇನೆ. ಆದ್ದರಿಂದ, ಈ

ಮಸೂದೆ ಕೇವಲ ಪ್ರಚಾರಕ್ಕೆ ತಂದಿರತಕ್ಕಂಥಾದ್ದೇ ವಿನಹ What prevents you from reviewing? From the last one or two years, you have not reviewed anything. ತಿರುಗಿ ಈ ಕಾನೂನನ್ನು ಮಾಡುವುದಕ್ಕೆ ಹೊರಟರೆ ಇದರಿಂದ ಏನು ಉಪಯೋಗ ?

ಶ್ರೀ ಜಿ. ಎಸ್. ಶಿವನಂಜಪ್ಪ :- ಮಾನ್ಯ ಸಿಂಧ್ಯಾರವರೆ ಈಗಿರುವ ಕಾನೂನಿನಲ್ಲಿ ಪನಿಷ್‌ಮೆಂಟ್‌ಗೆ ಅವಕಾಶ ಇಲ್ಲ. ಫೋರ್ಸ್ ಆಫ್ ಲಾ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ನಾನು ಹೇಳುವುದೇನೆಂದರೆ, ಈಗಿರತಕ್ಕ ಕಾನೂನಿನಲ್ಲಿ ಆ್ಯಕ್ಷನ್ ತೆಗೆದುಕೊಳ್ಳಲಿಕ್ಕೆ ಅವಕಾಶ ಇದೆ. ನಾನು ರೆಸ್ಪಾನ್ಸಿಬಲ್ ಅಪೋಸಿಷನ್ ಮೆಂಬರ್ ಆಗಿ ಸ್ಪೆಸಿಫಿಕ್ ಆಗಿ ಚಾರ್ಜಸ್ ಮಾಡಿದಾಗ ನೀವು ಏಕೆ ಆ ಅಧಿಕಾರಿ ಮೇಲೆ ಎನ್‌ಕ್ವೈಯರಿ ಮಾಡಲಿಲ್ಲ ? ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ತಿರುಗಿ ಅವರನ್ನು ಒಳ್ಳೆಯ ಜಾಗಕ್ಕೆ ಹಾಕಿದ್ದೀರಿ. ಆ ಜಾಗದಲ್ಲಿ ಇದ್ದರೆ ಏನಾಗುತ್ತದೆ ? ಪ್ರತಿಯೊಬ್ಬ ಅಧಿಕಾರಿಯೂ ಸಹಿತ ಅವರು ಹೇಳಿದ ಹಾಗೆಯೇ ನಡೆಯುತ್ತದೆ ಎನ್ನತಕ್ಕಂಥ ಭಾವನೆ ಬರುತ್ತದೆ. There are so many enquiries pending against him. ನಾನು ಕೆ. ಎಸ್. ಆರ್. ಟಿ. ಸಿ. ಮಂತ್ರಿಯಾಗಿದ್ದಾಗ, 30 ಕೋಟಿ ರೂಪಾಯಿ ಬೆಲೆ ಆಗುವಷ್ಟು ಚೆಸ್ಸಿಗಳನ್ನು ಕೆ. ಎಸ್. ಆರ್. ಟಿ. ಸಿ. ಬೋರ್ಡ್‌ನ ಅಪ್ರೂವಲ್ ಇಲ್ಲದೆ ಅವರು ಪರ್ಚೇಸ್ ಮಾಡಿದ್ದರು. ನಾನು ಅದರ ಬಗ್ಗೆ ಎನ್‌ಕ್ವೈಯರಿಗೆ ಆರ್ಡರ್ ಮಾಡಿದ್ದೆ. ಹಿಂದೆ ಇದ್ದ ಚೀಫ ಸೆಕ್ರೆಟರಿ ಸತೀಷಚಂದ್ರನ್ ಅವರು ಆ ಚಾರ್ಜಸ್ ಸರಿ ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರನ್ನು ತೆಗೆದುಕೊಂಡು ಬಂದು ಚೀಫ್ ಮಿನಿಸ್ಟರ್ ಅವರ ಸೆಕ್ರೆಟರಿಯಾಗಿ ಮಾಡಿದ್ದೀರಿ. ತಿರುಗಿ ಹಿಂದುಳಿದ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಹಾಯ ಮಾಡುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಇದಕ್ಕೆ ನಾವು ಏನು ಹೇಳಬೇಕು ? ಇದಕ್ಕೆ ದಯವಿಟ್ಟು ಉತ್ತರ ಕೊಡಿ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) :– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ಏನು ಒಂದು ವಿಧೇಯಕವನ್ನು ತಂದಿದ್ದಾರೆ, ಈ ವಿಧೇಯಕವನ್ನು ತತ್ವಶಃ ನಾವು ಒಪ್ಪುತ್ತೇವೆ. ಆದರೆ ನಾವು ಒಪ್ಪಿದಂತಹ ಅಭಿಪ್ರಾಯವನ್ನು ಜಾರಿ ಮಾಡುವಂತಹ ಒಂದು ನಿಷ್ಠೆ ಸಂಬಂದಪಟ್ಟವರಿಗೆ ಇರಬೇಕು. ಈ ನಿಷ್ಠೆಯ ಅಭಾವವನ್ನು ನಾವು ಕಾಣುತ್ತಿದ್ದೇವೆ ಎಂಬ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಸಂವಿಧಾನದ 15/4 ಅಥವಾ 16/4ರಲ್ಲಿ ಹಿಂದುಳಿದ ವರ್ಗದವರ ಪಟ್ಟಿಯನ್ನು ಏನು ತಯಾರು ಮಾಡಿದ್ದೇವೆ; ಆ ಪಟ್ಟಿಯಲ್ಲಿ ನಮೂದಿಸಿದಂತಹ ಜನ ಈ ಸರ್ಕಾರಿ ಸೇವೆಯಲ್ಲಿ ಇರಬಹುದು ಅಥವಾ ಬೇರೆ ಬೇರೆ ಸಂಘಸಂಸ್ಥೆಗಳಲ್ಲಿ ಏನು ಇದ್ದಾರೆ ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ ಎಂಬ ಕಾರಣಕ್ಕೋಸ್ಕರ ಅದಕ್ಕೆ ಕಾನೂನಿನ ರೂಪವನ್ನು ಕೊಡಬೇಕು ಕಾನೂನಿಗೆ ಬೆಂಬಲವನ್ನು ಕೊಡಬೇಕು ಎಂಬ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ; ನಿಜ. ಆದರೆ ಇದನ್ನು ಎಷ್ಟರಮಟ್ಟಿಗೆ ಜಾರಿ ಮಾಡಲಿಕ್ಕೆ ಸಾಧ್ಯ ? ಅವರು ಅರ್ಥ ವಿವರಣೆಯಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ Establishment in Public Sectors ಎಂದು ಹೇಳಿದ್ದಾರೆ ಹೀಗೆ ಹೇಳುತ್ತಾ ಆರು ವಿವರಣೆಗಳನ್ನು ಕೊಟ್ಟಿದ್ದಾರೆ. ನಾನು ಒಂದೊಂದೇ ವಿವರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಸಹಕಾರ ಸಂಘಗಳನ್ನು ಸಹ ನಾವು ಒಂದು ಘಟಕವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಆದರೆ ಪ್ರತಿ ಒಂದು ಸಹಕಾರ ಸಂಘದಲ್ಲಿ ಒಂದೋ ಎರಡೋ ಹುದ್ದೆಗಳು ಇರಬಹುದು. ಜವಾನನ ಹುದ್ದೆ ಇರಬಹುದು ಅಥವಾ ಗುಮಾಸ್ತನ ಹುದ್ದೆ ಇರಬಹುದು. ಅಥವಾ ಕಾರ್ಯದರ್ಶಿ ಹುದ್ದೆ ಇರಬಹುದು ಈ ರೀತಿ ಇದ್ದಂತಹ ಸಂದರ್ಭದಲ್ಲಿ ಯಾವ ರೀತಿಯಾಗಿ ಮೀಸಲಾತಿಯನ್ನು ಜಾರಿ ಮಾಡುತ್ತೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಮ್ಮ ಗಮನಕ್ಕೆ ಬಂದಿರಬಹುದು. ಇತ್ತೀಚಿನ ಸುಪ್ರೀಮ ಕೋರ್ಟಿನ ಆದೇಶವನ್ನು ತಾವು ಮನಗಂಡಿದ್ದೀರಿ ಎಂಬ ಮಾತನ್ನು ನಾನು ತಿಳಿದುಕೊಂಡಿದ್ದೇನೆ. ಒಂದು ಪಕ್ಷ ಅದರ ಬಗ್ಗೆ ಗಮನವನ್ನು ಹರಿಸದೇ ಇದ್ದಲ್ಲಿ, ತಾವು ಗಮನವನ್ನು ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ವಿವಿಧ ಶ್ರೇಣಿಗಳಲ್ಲಿ ಒಂದೇ ತರಹ ಹುದ್ದೆಗಳು ಇದ್ದರೆ, ಅಂತಹ ಹುದ್ದೆಗಳನ್ನು ಮೀಸಲಾತಿಗೆ ಒಳಪಡಿಸುವುದಕ್ಕೆ ಸಾಧ್ಯವೇ ? ಇದನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆ ಎಂದರೆ ನೀವು ಕೇವಲ ಕಾನೂನು ಮಾಡುತ್ತೇವೆ ಎಂದರೆ ಪ್ರಯೋಜನ ಇಲ್ಲ. ಈ ಕಾನೂನು ಸಿಂಧುತ್ವವನ್ನು ಪ್ರಶ್ನೆಮಾಡಿ ಅದರ ಲಾಭವನ್ನು ಪಡೆಯುವಂತಹ ಜನ ನಮ್ಮಲ್ಲಿ ಇದ್ದಾರೆ? ತಾವು ಹೇಗೆ ಬುದ್ಧಿವಂತರಿದ್ದೀರೋ ಹಾಗೆ ನಿಮಗಿಂತ ಈ ದೇಶದಲ್ಲಿ ಬುದ್ಧಿವಂತ ಜನರು ಇದ್ದಾರೆ. ತಾವು ಚಾಪೆಯ ಕೆಳಗೆ ತೂರಿದರೆ ಅವರು ರಂಗೋಲೆಯ ಕೆಳಗೆ ತೂರುತ್ತಾರೆ ಇಂತಹ ಜನ ಇದ್ದಾರೆ.

ಈ ಮಾತನ್ನು ಏಕೆ ಹೇಳುತ್ತೇನೆ ಎಂದರೆ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಪ್ರಚಾರಕ್ಕೋಸ್ಕರವಾಗಿ ಕಾನೂನನ್ನು ಜಾರಿಗೆ ತರುವುದಾದರೆ ಈ ಪ್ರಶ್ನೆ ಬೇರೆ. ಆದರೆ ತಮ್ಮ ಉದ್ದೇಶ ಈಡೇರಬೇಕಾದರೆ ನೀವು ಎಲ್ಲಾ ಅಂಶಗಳನ್ನು ಗಮನಿಸಬೇಕು ಮತ್ತು ಅದರ ಪರಿಣಾಮ ಏನು ಆಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ಇಡೀ ರಾಜ್ಯದಲ್ಲಿರತಕ್ಕ ಇಂತಹ ಸಂಘ ಸಂಸ್ಥೆಗಳು ಏನು ಇವೆ, ಒಟ್ಟಾರೆಯಾಗಿ ಇಂತಹ ಹುದ್ದೆಗಳಿವೆ ಎಂದು ಹೇಳಿದಾಗ ಮಾತ್ರ ನೀವು ಈ ಮೀಸಲಾತಿಗೆ ಅಳಪಡಿಸುವುದಕ್ಕೆ ಸಾಧ್ಯ ಇದೆಯೇ ಎಂಬ ಅಂಶವನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ಮತ್ತೊಂದು ಸಂಗತಿ ಏನು ಎಂದರೆ ವಿದ್ಯಾ ಸಂಸ್ಥೆಗಳು ಏನು ಇವೆ ಈ ವಿದ್ಯಾ ಸಂಸ್ಥೆಗಳು ಸರ್ಕಾರದಿಂದ ಸ್ಥಾಪನೆ ಆಗಿದ್ದರೆ ಅಥವಾ ನಿರ್ವಹಣೆ ಮಾಡುತ್ತಿದ್ದರೆ ಅಥವಾ ಸಹಾಯ ಧನ ಕೊಡುತ್ತಿದ್ದರೆ ಇಂತಹ ವಿದ್ಯಾ ಸಂಸ್ಥೆಗಳಲ್ಲಿ ಈ ಮೀಸಲಾತಿಯನ್ನು ನಾವು ತರುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ; ಆದರೆ ನಾನು ತಮ್ಮನ್ನು ಕೇಳುತ್ತಿದ್ದೇನೆ. ಇವೊತ್ತಿನ ದಿವಸ ಅನ್‌ಏಡೆಡ್ ಎಂದು ಏನು ಹೇಳುತ್ತೀರಿ, ತಾವು ಅದಕ್ಕೆ ಸಹಾಯ ಧನ ಕೊಡುತ್ತಿಲ್ಲ. ಆದರೆ ಸಹಾಯ ಧನ ಕೊಡದೇ ಇದ್ದಾಗ್ಯೂ ಸಹ ಅನೇಕ ಸಂಘ ಸಂಸ್ಥೆಗಳು ನಮ್ಮಲ್ಲಿವೆ. ಉದಾಹರಣೆಗೆ ಹೇಳುವುದಾದರೆ ಏಳು ವರ್ಷಗಳ ಅವಧಿಯಲ್ಲಿ ನಾವು ಯಾವುದೇ ಸಹಾಯ ಧನ ಇವರಿಗೆ ಕೊಡುವುದಿಲ್ಲ ಎಂದು ಹೇಳುತ್ತೀರಿ. ಏಳು ವರ್ಷದೊಳಗೆ ನೀವು ಸಹಾಯ ಧನ ಕೊಟ್ಟಂತಹ ಪ್ರಕರಣಗಳು ಅನೇಕ ಇದ್ದಾವೆ. ಇದರ ಜೊತೆಯಲ್ಲಿ ಏಳು ವರ್ಷ ಸಹಾಯ ಧನ ಕೊಡುವುದಿಲ್ಲ ಎಂದು ಯಾವಾಗ ತಾವು ಹೇಳುತ್ತೀರೋ ಆಗ ಅವರು ಎಷ್ಟು ಜನ ಬೇಕೋ ಅಷ್ಟು ಉಪಾಧ್ಯಾಯರನ್ನು, ನೌಕರರನ್ನು ಹಂಗಾಮಿಯಾಗಿ ನೇಮಕ ಮಾಡಿಕೊಳ್ಳುತ್ತಾರೆ, ಆಗ ತಾವು ಏನು ಮಾಡುತ್ತೀರಿ ? ಈ ರೀತಿ ಆದಾಗ ಆ ಒಂದು ಮೀಸಲಾತಿಗೆ ಒಳಪಟ್ಟಾಗ ಮಾತ್ರ ತಾವು ಸಹಾಯ ಧನ ಕೊಡಬೇಕು ಎಂಬುದನ್ನು ಏನಾದರೂ ಕಾನೂನಿನಲ್ಲಿ ಹೇಳಿದ್ದೀರಾ ? ಒಂದು ಪಕ್ಷ ಇದನ್ನು ವಿವರವಾಗಿ ವಿಷಧವಾಗಿ ಹೇಳದೇ ಇದ್ದರೆ ಪುನಃ ನಿಮ್ಮ ಮೇಲೆ ಪ್ರಭಾವ ತಂದು ಏನು ನಿಮಗೆ ನಿಷ್ಠೆ ಇದೆ, ತಾವು ಹಿಂದುಳಿದವರ ಪರಿಶಿಷ್ಟ ಜಾತಿಯವರ ಬಗ್ಗೆ ಕಾಳಜಿ ತೋರಿಸಬೇಕೆಂದು ಪ್ರಯತ್ನಪಟ್ಟಿದ್ದೀರಿ, ಇದು ಖಂಡಿತವಾಗಿ ಜಾರಿ ಸಾಧ್ಯ ಇಲ್ಲ. ಇದು ಕಾಗದದ ಮೇಲೆ ಉಳಿಯುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಣ್ಣ ಸಣ್ಣ ಸಂಘ ಸಂಸ್ಥೆಗಳು, ಲೋಕಲ್ ಅಥಾರಿಟೀಸ್‌ಗಳು ಏನು ಇದ್ದಾವೆ; ಈ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಹ ಎಲ್ಲೆಲ್ಲಿ ನೌಕರರ ಸಂಖ್ಯೆ ಬಹಳ ಕಡಿಮೆ ಇರುತ್ತದೆ ಎಲ್ಲೆಲ್ಲಿ ವಿವಿಧ ಶ್ರೇಣಿಯ ಹುದ್ದೆಗಳು ಇದ್ದಾವೆ, ಅವು ಬಹಳ ಕಡಿಮೆ ಪ್ರಮಾಣದಲ್ಲಿ ಇದ್ದಾವೆ. ಅಲ್ಲಿ ತಾವು ಒಂದು ವರ್ಗವನ್ನು ಒಂದು ಒಕ್ಕೂಟವನ್ನು ರಚಿಸುವುದರ ಮುಖಾಂತರ ಇದನ್ನು ಮಾಡಲಿಕ್ಕೆ ಸಾಧ್ಯ ಇದೆ. ಕೇವಲ ಒಂದು ಸ್ಥಳೀಯ ಸಂಸ್ಥೆಗೆ ಒಂದು ಮೀಸಲಾತಿಯನ್ನು ಮಾಡುತ್ತೇವೆ ಅಂದರೆ ಅದು ಖಂಡಿತವಾಗಿ ಕಾರ್ಯಸಾಧ್ಯವಲ್ಲ. ಇದು ಕಾನೂನು ಪ್ರಕಾರ ಸಹ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇವೊತ್ತಿನ ದಿವಸ ಇದರ ಬಗ್ಗೆ ಪರ್ಯಾಲೋಚನೆ ಮಾಡಬೇಕು. ಸಂಬಂಧಪಟ್ಟವರ ಮತ್ತು ಕಾನೂನು ತಜ್ಞರ ಸಲಹೆಯನ್ನು ತಾವುಗಳು ಪಡೆಯಬೇಕೆಂಬ ಮಾತನ್ನು ಹೇಳಲು ಇಷ್ಟಪಡುತ್ತೇನೆ. ಅದೇ ರೀತಿಯಾಗಿ ವಿಶ್ವವಿದ್ಯಾನಿಲಯಗಳು ಇರಬಹುದು ಮತ್ತು ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಹಾಗೂ ಸಾರ್ವಜನಿಕ ವಲಯದಲ್ಲಿರತಕ್ಕಂಥ ಸಂಸ್ಥೆಗಳು ಇರಬಹುದು, ಅವೆಲ್ಲವುಗಳ ಬಗ್ಗೆಯೂ ಸಹ ಈ ಪರಿಶಿಷ್ಟ ಜಾತಿ ಮತ್ತು ಪಂಗಡ ವರ್ಗಗಳಿಗೆ ಮೀಸಲಾತಿಯನ್ನು, ಆ ಒಂದು ಸೌಕರ್ಯವನ್ನು ಕೊಡುವುದಕ್ಕೆ ಕಾನೂನಿನ ಒಂದು ಬೆಂಬಲವನ್ನು ಕೊಡಬೇಕೆಂದು ಹೇಳಿ, ಇದು ಖಂಡಿತವಾಗಿ ಕಷ್ಟಸಾಧ್ಯ ಎಂಬ ಮಾತನ್ನು ಕೂಡ ಹೇಳಬೇಕಾಗುತ್ತದೆ. ಏಕೆಂದರೆ, ಇವೊತ್ತಿನ ದಿವಸ ದೇಶದಲ್ಲಿ ಯಾರು ಸ್ವಾಮಿ ಹಿಂದುಳಿದವರು ಎಂದು ಹೇಳುವುದು ? ಒಂದು ಕಡೆ ನಾವು ಹೇಳುತ್ತೇವೆ ಜಾತಿ ಆಧಾರಿತ ಸಮಾಜಕ್ಕೆ, ಆ ಆಧಾರದ ಮೇಲೆ ಮೀಸಲಾತಿ ಬೇಕು ಎಂದು ಹೇಳುತ್ತಿದ್ದೇವೆ, ಒಂದು ಪಕ್ಷದವರು, ಒಂದು ಕಡೆ ಈ ಮಾತನ್ನು ಹೇಳಿದರೆ ಇನ್ನೊಂದು ಕಡೆ ಅದೇ ಪಕ್ಷದವರು ಕೇವಲ ಜಾತಿ ಆಧಾರದ ಮೇಲೆ ಮೀಸಲಾತಿ ಇದ್ದರೆ ಸಾಲದು, ರಾಷ್ಟ್ರದಲ್ಲಿ ಆರ್ಥಿಕ ಪರಿಸ್ಥಿತಿ ಏನಿದೆ ಯಾರು ಅದರಲ್ಲಿ ಹಿಂದುಳಿದಿರುವವರು ಇದ್ದಾರೆ ಅದರ ಆಧಾರದ ಮೇಲೆ ಮೀಸಲಾತಿ ಬೇಕೆಂಬ ಮಾತನ್ನು ಹೇಳುತ್ತಾರೆ. ಆದುದರಿಂದ ಎಂಥ ಒಂದು ರಾಷ್ಟ್ರೀಯ ಪಕ್ಷವೂ ಸಹ ಈ ಬಗ್ಗೆ ಒಂದು ನಿರ್ದಿಷ್ಟ ನೀತಿಯನ್ನು ತಾಳಬೇಕಾಗುತ್ತದೆ. ಈ ಒಂದು ಸಂದರ್ಭೋಚಿತವಾದ ವಾದವನ್ನು ಮಾಡುವ ವಿಧವನ್ನು ಬಿಟ್ಟು, ಆ ಪ್ರವೃತ್ತಿಯನ್ನು ಬಿಟ್ಟು ಹೋದರೆ ಮಾತ್ರ ಸಾಧ್ಯವಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿರುವುದನ್ನು ನಾವು ಈ ದಿಸೆಯಲ್ಲಿ ನೋಡುತ್ತಾ ಇದ್ದೇವೆ. ಎಲ್ಲಿಯವರೆಗೆ ಈ ಕುರಿತು ನಮ್ಮ ರಾಷ್ಟ್ರೀಯ ಪಕ್ಷಗಳು ಒಂದು ನಿರ್ದಿಷ್ಟ ನಿಲುವನ್ನು ತಾಳುವುದಿಲ್ಲವೋ ಅಲ್ಲಿಯವರೆಗೆ ಇದು ಒಂದು ರೀತಿಯಲ್ಲಿ ಅಸಾಧ್ಯವಾದ ಮಾತು ಎಂದು ಹೇಳ ಬಯಸುತ್ತೇನೆ. ಅದೇ ರೀತಿಯಲ್ಲಿ ಇವೊತ್ತಿನ ದಿವಸ "there is no adequate representation in public service" ಹೇಳುತ್ತೀರಿ How you are going to determine it ? ಅದಕ್ಕೆ ಬೇಕಾದಂಥ ಮಾಹಿತಿಯನ್ನು ತಾವುಗಳು ಸಂಗ್ರಹ ಮಾಡಿದ್ದೀರಾ ? ಒಂದು ವೇಳೆ ಸಂಗ್ರಹ ಮಾಡದಿದ್ದಲ್ಲಿ ಅದನ್ನು ಇನ್ನಾದರೂ ಮಾಡುವಂಥ ಒಂದು ಕೆಲಸವನ್ನು ಮಾಡುತ್ತೀರಾ ? ಇನ್ನೊಂದನ್ನು ತಾವು ಹೇಳುತ್ತೀರಿ, ಸಂವಿಧಾನದ 15/4 ಮತ್ತು 16/4 ರ ಪ್ರಕಾರ ತಾವು ಏನೊಂದು ವಿಂಗಡಣೆ ಮಾಡಿದ್ದೇವೆ ಅದರ ಆಧಾರದ ಮೇಲೆ ನಾವು ಹುದ್ದೆಗಳನ್ನು

ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದರೂ ಸಹ ಅದಕ್ಕೆ ಬೇಕಾದಂಥ ಒಂದು ಪಕ್ಷ ಅದನ್ನು ವಿರೋಧ ಮಾಡಿದ್ದರೆ. ಪಾಲನೆ ಮಾಡದಿದ್ದರೆ ಮತ್ತು ಉಲ್ಲಂಘನೆ ಮಾಡಿದಾಗ ಅಂಥ ಪ್ರಕರಣಗಳಲ್ಲಿ ಶಿಕ್ಷೆ ಮಾಡುವಂಥ ಒಂದು ಕಾನೂನನ್ನು ತಾವು ತೆಗೆದುಕೊಂಡಿದ್ದೀರಾ ? ಆದರೆ ಕೇವಲ ಶಿಕ್ಷೆ ಮಾಡುವಂಥ ಅಧಿಕಾರ ಕಾನೂನು ಅಥವಾ ವಿಧೇಯಕದ ಚೌಕಟ್ಟಿನಲ್ಲಿ ಇದ್ದರೆ ಸಾಲದು. ಅಂಥವನ್ನು ಮಾಡುವಂಥ ಸಂದರ್ಭದಲ್ಲಿ ಯಾವುದೇ ಪಕ್ಷದ ಸರಕಾರ ಇದ್ದರೂ ಕಳಕಳಿಯಿಂದ ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಒಂದು ಪ್ರವೃತ್ತಿ ಇಲ್ಲದಿದ್ದರೆ ಕಾನೂನುಗಳನ್ನು ನಾವು ಏನು ಮಾಡಿದ್ದೇವೆ ಅವುಗಳು ಕಾಗದದ ಮೇಲೆ ಉಳಿದುಕೊಳ್ಳುತ್ತವೆ. ಇವೊತ್ತಿನ ದಿವಸ ಬಹಳಷ್ಟು ಸಂದರ್ಭಗಳಲ್ಲಿ ಅಧಿಕಾರಿಗಳು ಇಂಥ ಸಂದರ್ಭಗಳಲ್ಲಿ ತಪ್ಪು ಮಾಡಿದ್ದಾರೆ ಎಂದು ಹೇಳಿದ್ದರೂ ಸಹ. ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಸಹ ಅಂಥ ಸಂದರ್ಭಗಳಲ್ಲಿ ನಾವು ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ? ಯಾವ ಅಧಿಕಾರಿಯ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿದ್ದೇವೆ, ಅಥವಾ ಇಂಥ ಅಧಿಕಾರಿ ಕಾನೂನು ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಿದ್ದೇವೆ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಬದಲು ಅವರ ಹಿತ ಕಾಪಾಡುವುದಕ್ಕೆ ತಮ್ಮ ಶಕ್ತಿ ಮೀರಿ ಶ್ರಮಪಟ್ಟ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಒತ್ತಾಯ ತಂದ ಪ್ರಕರಣಗಳು ಬೇಕಾದಷ್ಟು ಇವೆ. ಅಂಥವರನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ ಉತ್ತಮ ಸ್ಥಾನದಲ್ಲಿದ್ದುಕೊಂಡು ಕಾನೂನು ಉಲ್ಲಂಘನೆ ಮಾಡಿ ಜನಸಾಮಾನ್ಯರ ಹಿತಕ್ಕೆ ವಿರುದ್ಧವಾದಂಥ ವರ್ತನೆ ಮಾಡಿದಂಥ ಅಧಿಕಾರಿಗಳನ್ನು ಉನ್ನತ ಸ್ಥಾನಗಳಿಗೆ ನೇಮಕ ಮಾಡುವಂಥ ಒಂದು ಪ್ರವೃತ್ತಿ ಹೋಗಬೇಕು. ಅದನ್ನು ನಿಲ್ಲಿಸಿದಾಗ ಮಾತ್ರ ಒಳ್ಳೆಯ ಕೆಲಸ ಮಾಡುತ್ತೇವೆ ಎಂಬ ವಿಶ್ವಾಸ ಬರುವುದಕ್ಕೆ ಸಾಧ್ಯವಿದೆ. ಆದರೆ ಅಂಥ ವಿಶ್ವಾಸ ಬರುವುದಕ್ಕೆ ಬಹಳ ವಿರುದ್ಧವಾದ ದಿಕ್ಕಿನಲ್ಲಿ ನಮ್ಮ ಸರಕಾರದ ಪ್ರವೃತ್ತಿ ಆಗುತ್ತಾ ಇದೆ. ಎಂದು ನೊಂದ ಮನಸ್ಸಿನಲ್ಲಿ ಹೇಳಬೇಕಾಗಿದೆ. ತಾವು ಮತ್ತೊಂದು ಸ್ಥಾಯಿ ಸಮಿತಿಯನ್ನು ನೇಮಕ ಮಾಡಿದ್ದೀರಿ. ಹಾಗೆ ಮಾಡಲು ರಾಜ್ಯಾಂಗದಲ್ಲಿ ಅದಕ್ಕೆ ಅವಕಾಶ ಇದೆ. ಇಡೀ ರಾಷ್ಟ್ರದಲ್ಲಿಯೇ ಪರಿಶಿಷ್ಟ ಜಾತಿ. ಪಂಗಡಗಳವರಿಗೆ ಸೇರಿದಂಥ ಯೋಜನೆಗಳು ಏನಿವೆ ಅವುಗಳು ಅವರಿಗೆ ಪರಿಣಾಮಕಾರಿಯಾಗಿ ಸೇರಿವೆಯೋ ? ಎಂಬುದನ್ನು ಸಮೀಕ್ಷೆ ಮಾಡಿ ಕೊಟ್ಟ ವರದಿಗಳನ್ನು ನಾವು ನೋಡಿದ್ದೇವೆ. ಅಂಥ ಎಲ್ಲಾ ವರದಿಗಳಲ್ಲೂ ಸಹ ಆ ವರ್ಗದಲ್ಲಿಯೂ ಸಹ ಅಲ್ಲಿನ ಒಂದು ಪ್ರಮುಖ ವರ್ಗದವರಿಗೆ ಮಾತ್ರ ಇದರ ಲಾಭ ತಲುಪಿದೆ. ಅದನ್ನು ಬಿಟ್ಟರೆ ಆ ವರ್ಗದಲ್ಲಿನ ಸಾಮಾನ್ಯ ಜನರಿಗೆ ಈ ಯೋಜನೆಗಳ ಲಾಭ ಇನ್ನೂ ಸರಿಯಾಗಿ ತಲುಪಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಈಗ ತಾವುಗಳು ವಿಂಗಡನೆ ಮಾಡಿದ ಕ್ರಮ ಸರಿಯಾಗಿದೆಯೋ ? ಆ ವರ್ಗದಲ್ಲಿಯೂ ಸಹ ಉತ್ತಮ ಸ್ಥಾನದಲ್ಲಿ ಯಾರಿದ್ದಾರೆ ಅಥವಾ ಆರ್ಥಿಕವಾಗಿ ಅವರುಗಳನ್ನು ಹೋಲಿಕೆ ಮಾಡಿ ನೋಡಿದಾಗ ಉತ್ತಮ ಸ್ಥಿತಿಯಲ್ಲಿರುವವರಿಗೂ ಈ ಸೌಲಭ್ಯಗಳನ್ನು ಕೊಡಬೇಕೇ ? ಎಂಬುದನ್ನು ಯೋಚಿಸಬೇಕು. ಆ ವರ್ಗದಲ್ಲಿಯೂ ಯಾರು ಹಿಂದುಳಿದವರು ಇದ್ದಾರೆ ಅಂಥವರಿಗೆ ಸವಲತ್ತುಗಳನ್ನು ಕೊಡತಕ್ಕಂಥ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂಥ ವಿಚಾರಗಳನ್ನು ಈ ಕಾನೂನಿನಲ್ಲಿ ಇಟ್ಟಿದ್ದರೆ ಬಹಳ ಒಳ್ಳೆಯದಾಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

ಮತ್ತೊಂದು ಮುಖ್ಯ ಅಂಶವೆಂದರೆ ಪ್ರತಿ ಸರ್ಕಾರಿ ಸಂಸ್ಥೆಯು ತನ್ನ ವಾರ್ಷಿಕ ವರದಿಯನ್ನು ಸಲ್ಲಿಸಬೇಕೆಂದು ಸೆಕ್ಷನ್ 10 ರಲ್ಲಿ ಹೇಳಿದೆ. ಆದರೆ ಎಷ್ಟು ಸಂಘ ಸಂಸ್ಥೆಗಳು ಆ ಸೆಕ್ಷನ್‌ನ್ನು ಗೌರವಿಸಿ ಅವುಗಳ ವಾರ್ಷಿಕ ವರದಿಗಳನ್ನು ಈ ಸದನದ ಮುಂದಿಟ್ಟಿವೆ ? ತಮ್ಮನ್ನು ಕೇಳುತ್ತೇನೆ. ಒಂದು ವೇಳೆ, ಆ ಸಂಸ್ಥೆಗಳು ನಿಗದಿತ ಸಮಯದಲ್ಲಿ ವರದಿಗಳನ್ನು ಇಲ್ಲಿ ಹಾಜರು ಮಾಡದೇ ಇದ್ದರೆ ಅವುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಎಷ್ಟೋ ಸಂಸ್ಥೆಗಳು ಐದು ಹತ್ತು ವರ್ಷಗಳಾದರೂ ತನ್ನ ವರದಿಯನ್ನು ಇಟ್ಟಿಲ್ಲ. ಅವುಗಳನ್ನು ಪರಿಶೀಲನೆ ಮಾಡಲು ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಈ ದೇಶದಲ್ಲಿದೆ, ಆದರೆ ಕೇವಲ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟರೆ ಸಾಲದು, ಹಾಗೆ ಮುಂದಿಡದಿದ್ದ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಬೇಕಾದ ಒಂದು ಕಾನೂನನ್ನು ಅಳವಡಿಸಿಕೊಳ್ಳಬೇಕು. ತತ್ಕ್ಷಣ ಇದರಲ್ಲಿ ಅಡಕವಾಗಿರುವ ಅಂಶವನ್ನು ನಾನು ಒಪ್ಪಿಕೊಂಡರೂ ಸಹ ಕಾರ್ಯಸಾಧುವಲ್ಲದ ಕಾನೂನು ಇದು. ಇದರ ಬಗ್ಗೆ ವಿಚಾರ ಮಾಡಬೇಕು ಅದಕ್ಕಾಗಿ ಜಂಟಿ ಸಲಹಾ ಸಮಿತಿಗೆ ಕಳಿಸಬೇಕು. ಅಲ್ಲಿ ವಿವರವಾಗಿ ಅಭ್ಯಾಸ ನಡೆಯಲಿ, ಈ ಕಾನೂನಿನನ್ವಯ ಶೋಷಿತರು ಯಾರಿದ್ದಾರೆ ಅವರಿಗೆ ಅನುಕೂಲವಾಗಬೇಕಾದರೆ ಇದನ್ನು ಸದನದ ಸಮಿತಿಗೆ ಕಳಿಸಬೇಕೆಂದು ಹೇಳಿ ಈ ಕಾನೂನನ್ನು ಬೆಂಬಲಿಸುತ್ತ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ (ಹೆಗ್ಗಡದೇವನಕೋಟೆ) :– ಉಪಾಧ್ಯಕ್ಷಿಣಿಯವರೆ, ಈಗ ಸರ್ಕಾರದವರು ಏನು ಕಾನೂನು ಮಂಡಿಸಿದಾರೆ. ಅದು ಬಹಳ ಸೂಕ್ತವಾದದ್ದು, ಇದುವರೆಗೂ ತುಂಬದೇ ಇದ್ದ ಬ್ಯಾಕ್‌ಲಾಗ್ ಏನಿದೆ ಅದನ್ನು ಫಿಲ್‌ಅಪ್ ಮಾಡಿರಲಿಲ್ಲ: ಸಿಂಧ್ಯಾ ಅವರು ಹೇಳಿದಂತೆ ಇಲಾಖಾ ಮುಖ್ಯಸ್ಥರೆಲ್ಲ ಮೇಲ್ಜಾತಿಯವರಾಗಿದ್ದು ಶೋಷಿತರನ್ನು ತುಂಬಲು ಸರಿಯಾಗಿ ಅವಕಾಶ ಕೊಡುವುದಿಲ್ಲ. ಇದರ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಸಚಿವರು ಪರಿಶಿಷ್ಟ ಜಾತಿಯವರಿದ್ದು ಬಹಳ ಧೈರ್ಯಮಾಡಿ ಈ ವಿಧೇಯಕವನ್ನು ತಂದಿದ್ದಾರೆ. ಇದೇ ರೀತಿ ಸಚಿವರು ಪರಿಶಿಷ್ಟ ಜಾತಿಯ ಕಲ್ಯಾಣಕ್ಕೆ ಬೇಕಾದ ಎಲ್ಲ ಕಾರ್ಯಕ್ರಮವನ್ನೂ ಹಾಕಿಕೊಳ್ಳಲಿ, ಅದಕ್ಕೆ ಜನತಾ ಪಕ್ಷದ ಸಂಪೂರ್ಣ ಸಹಕಾರವಿದೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಕರಿಯಣ್ಣ (ಹೊಳಿ ಹೊನ್ನೂರು) :– ಈ ಬಿಲ್ಲನ್ನು ನಾನು ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಸಿಂಧ್ಯಾ ಅವರು ಹೇಳಿದಂತೆ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ನಮಗೆ ರಿಸರ್ವೇಷನ್ ಇರಲಿಲ್ಲವಾದರೂ ಸಹ ಹರಿಜನ ಗಿರಿಜನರು ಯಾವ ಸಬ್ಜೆಕ್ಟ್‌ನಲ್ಲಿ ಓದಿದ್ದಾರೋ ಅದಕ್ಕೆ ಸೇರಿದ ಹುದ್ದೆ ಮೀಸಲಾಗಿದ್ದರೆ ಇವರು ಸಿಗದಿರುವ ಸಬ್ಜೆಕ್ಟ್‌ನಲ್ಲಿ ಸೂಕ್ತ ಅಭ್ಯರ್ಥಿಗಳು ಬರಲಿಲ್ಲವೆಂದು ಅಧಿಕಾರಿಗಳು ಒಂದು ವರ್ಡ್ ಬರೆದು ಹರಿಜನ ಗಿರಿಜನರಿಗೆ ನೌಕರಿ ಕೊಡದಿರುವ ಕೆಲಸ ಈಗಲೂ ನಡೆಯುತ್ತಿದೆ. ಆದ್ದರಿಂದ ಇದುವರೆಗೂ ಖಾಲಿ ಬಿಟ್ಟಿರುವ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಒಂದೇ ಸಲ ಅಪಾಯಿಂಟ್ ಮಾಡುವುದು ಸೂಕ್ತ. ಇಲ್ಲದಿದ್ದರೆ ಸರ್ಕಾರ ಚಾಪೆ ಕೆಳಗೆ ನುಗ್ಗಲು ಹೋದರೆ ರಂಗೋಲಿ ಕೆಳಗೇನೆ ನುಗ್ಗುವ ಜನರಿದ್ದಾರೆ. ಇನ್ನು ಪಬ್ಲಿಕ್ ಸೆಕ್ಟಾರ್ ಬಗ್ಗೆ ಹೇಳಿದರು. ನಿಜವಾಗಿಯೂ ಇಷ್ಟೋ ವರ್ಷಗಳಕಾಲ ಆ ಸಂಸ್ಥೆಗಳಲ್ಲಿ ಮೇಲ್ಜಾತಿಯವರನ್ನೇ ಅಪಾಯಿಂಟ್ ಮಾಡಿಕೊಂಡಿದ್ದಾರೆ, ಅವೆಲ್ಲಾ ಹರಿಜನ ಗಿರಿಜನರಿಗೆ ಸಿಗಬೇಕಾಗಿತ್ತು. ಮೊದಲಿನಿಂದಲೂ ಇವರಿಗೆ ಬೇಕಾದವರನ್ನು ತುಂಬಿಕೊಂಡರು ಕೊನೆಗೆ 58 ಸಾವಿರ ಟೆಂಪೊರರಿ ಎಂದು ಮಾಡಿ ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಕನ್‌ಫರ್ಮ್ ಮಾಡಲಾಗುವುದೆಂದು ಹೇಳಿದರು. ಮಾನ್ಯ ಖರ್ಗೆಯವರು ಹಿಂದೊಮ್ಮೆ ಪ್ರಶ್ನೆ ಕೇಳಿ ಪರಿಶಿಷ್ಟ ಜಾತಿ ಪಂಗಡಗಳವರಿಗೆ ಅದರಲ್ಲಿ ಶೇಕಡ 18 ರಷ್ಟು ಅಪಾಯಿಂಟ್‌ಮೆಂಟ್ ಸಿಗಬೇಕಾಗಿತ್ತು. ಆದರೆ ಬರೀ 2500 ನೌಕರರಿಗೆ ಮಾತ್ರ ಸಿಗುತ್ತಿದೆ, ಉಳಿದ ಪ್ರಮಾಣವನ್ನು ಹೇಗೆ ತುಂಬುವಿರಿ ಎಂದು ಕೇಳಿದರು. ಅದಕ್ಕೂ ಸಹಿತ ನೀವು ಆ ರೀತಿಯಲ್ಲಿ ಎಲ್ಲೆಲ್ಲಿ ಕಂಪನಿಗಳಲ್ಲಿ ನೌಕರಿಗೆ ತೆಗೆದುಕೊಂಡಿಲ್ಲವೋ ಅದನ್ನು ನಿಲ್ಲಿಸಿ ಹರಿಜನ ಗಿರಿಜನರನ್ನು ತೆಗೆದುಕೊಳ್ಳತಕ್ಕಂಥ ಒಂದು ಸವಲತ್ತನ್ನು ಇದರಲ್ಲಿ ಅಳವಡಿಸುವುದಕ್ಕೆ ಏನಾದರೂ ನೀವು ರೂಲ್ಸ್‌ನ್ನು ಮಾಡುತ್ತೀರಾ, ಇದರ ಬಗ್ಗೆ ತಾವು ದಯಮಾಡಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈಗ ಒಂದು ಕಮಿಟಿಯನ್ನು ರಾಜ್ಯಮಟ್ಟದಲ್ಲಿ ಮಾಡಿದ್ದೀರಿ. ಇದನ್ನು ಸ್ಕ್ರುಟಿನಿ ಮಾಡುವುದಕ್ಕೆ ಎಂದು ಮಾಡಿದ್ದೀರಿ. ಈಗ ನಮಗೆ ಬರುವುದು ಎಂದರೆ ವಿದ್ಯಾ ಸಂಸ್ಥೆಗಳು. ಕೋ–ಆಪ್‌ರೇಟಿವ್ ಇನ್‌ಸ್ಟಿಟ್ಯೂಷನ್ಸ್ ಮುನ್ಸಿಪಾಲಿಟಿ ಮತ್ತು ಕಾರ್ಪೊರೇಷನ್ಸ್ ಹಾಗೂ ಪಬ್ಲಿಕ್ ಸೆಕ್ಟಾರ್ ಕಂಪನಿಗಳು ಬರುತ್ತಿರುವುದರಿಂದ ಇದು ಆಯಾ ಜಿಲ್ಲೆಯಲ್ಲಿಯೇ ಒಂದೊಂದು ಕಮಿಟಿಯನ್ನು ಮಾಡಿದರೆ ಮಾತ್ರ ಸ್ಕ್ರುಟಿನಿ ಮಾಡಿ ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ರೀತಿಯಾಗಿ ಅನ್ಯಾಯವಾಗಿದೆ ಎನ್ನತಕ್ಕಂಥದ್ದನ್ನು ಸ್ಕ್ರುಟಿನಿ ಮಾಡುವುದಕ್ಕೆ ಆಗುತ್ತಿದೆಯೇ ವಿನಹ ರಾಜ್ಯಮಟ್ಟದಲ್ಲಿ ಯಾವುದೋ ಒಂದು ಕಾಲಕ್ಕೆ ಸೇರಿ ಯಾವುದೋ ಒಂದು ಕಂಪ್ಲೆಂಟ್ ಬಂದಿದ್ದನ್ನು ಎನ್‌ಕ್ವೈರಿ ಮಾಡಿ ಮತ್ತು ಉದ್ಯೋಗ ಸಿಗದೇ ಇರತಕ್ಕಂಥ ಅವಕಾಶ ಮಾಡತಕ್ಕಂಥದ್ದು ಅದು ಆಗುತ್ತದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿಯೂ ಸಹಿತ ಒಂದು ಸಮಿತಿಯನ್ನು ಮಾಡಿ ಎಲ್ಲಿ ಹರಿಜನ ಗಿರಿಜನರಿಗೆ ಅನ್ಯಾಯವಾಗಿದೆಯೋ ಅದನ್ನು ಪರಿಶೀಲನೆ ಮಾಡತಕ್ಕಂಥದ್ದು ಉತ್ತಮ ಎಂದು ನಾನು ಹೇಳುತ್ತೇನೆ. ಇದಲ್ಲದೆ, ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಯಲ್ಲಿ ಈಗ ಯಾರ್ಯಾರೋ ನಾವು ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಹೇಳಿ ಸರ್ಟಿಫಿಕೇಟನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಅದನ್ನು ಎನ್‌ಕ್ವೈರಿ ಮಾಡಬೇಕು. ನಿಜವಾಗಿಯೂ ಇಲ್ಲಿ ಬೋಗಸ್ ಸರ್ಟಿಫಿಕೇಟನ್ನು ತೆಗೆದುಕೊಂಡು ಅಪಾಯಿಂಟ್‌ಮೆಂಟ್‌ಗೂ ಸೇರಿಬಿಟ್ಟಿದ್ದಾರೆ. ವಿದ್ಯಾಭ್ಯಾಸಕ್ಕೂ ಕೂಡ ಹೋಗಿದ್ದಾರೆ. ಸರ್ಕಾರ ಬಂದವುಗಳು ಏನು ಮಾಡುತ್ತವೆ ಎಂದರೆ ಏನೋ ತೆಗೆದುಕೊಂಡು ಬಿಟ್ಟರು, ಪಾಪ ಹೋಗಲಿ ಬಿಡು ಎಂದು ಹೇಳಿ ಹಿಂದಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ ಮಾರ್ಜಿನ್ ಕೊಟ್ಟು ಎಷ್ಟೋ ಜನರನ್ನು ಹಾಗೆಯೇ ಬಿಟ್ಟುಬಿಟ್ಟರು. ದಲಿತ ಸಂಘರ್ಷ ಸಮಿತಿಯವರು ಇದಕ್ಕಾಗಿ ಮೆರವಣಿಗೆಯನ್ನು ಕೂಡ ಮಾಡಿದ್ದಾರೆ. ಈ ರೀತಿಯಾಗಿ ಸುಳ್ಳು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ನೌಕರಿ ಮತ್ತು ವಿದ್ಯಾಭ್ಯಾಸಕ್ಕೆ ಹೋಗತಕ್ಕಂಥವರಿಗೆ ಒಂದು ಪನಿಷ್‌ಮೆಂಟ್‌ನ್ನು ಮಾಡತಕ್ಕಂಥದ್ದು ಸಹಿತ ಇದರಲ್ಲಿ ಇನ್‌ವಾಲ್ವ್ ಮಾಡಿದರೆ ಚೆನ್ನಾಗಿರುತ್ತದೆ ಎಂದು ಹೇಳಿ ಈ ಒಂದು ಕಾನೂನನ್ನು ತರತಕ್ಕಂಥದ್ದು ಬಹಳ ಸಂತೋಷ. ಈಗಲಾದರೂ ಇದನ್ನು ಸಮರ್ಪಕವಾಗಿ ಜಾರಿ ಮಾಡಿ ಹರಿಜನ ಗಿರಿಜನರಿಗೆ ಅನುಕೂಲವನ್ನು ಮಾಡಲಿ ಎಂದು ಹೇಳಿ ಸರ್ಕಾರವನ್ನು ಒತ್ತಾಯಿಸುತ್ತಾ ಈ ಆ್ಯಕ್ಟ್ ತಂದಿರತಕ್ಕಂಥದ್ದನ್ನು ನಾನು ಸ್ವಾಗತಿಸುತ್ತೇನೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಮಸೂದೆಯನ್ನು ಏನು ಇವತ್ತು ಮಂಡಿಸಿದ್ದಾರೆ, ಅದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ಇದರಲ್ಲಿ ಗೌರ್ನಮೆಂಟ್‌ನದು ನಿಜವಾದ ಕಮಿಟ್‌ಮೆಂಟ್ ಏನು ಇರಬೇಕೋ ಆ ಕಮಿಟ್‌ಮೆಂಟ್ ಇಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಈಗಾಗಲೇ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರನ್ನು ಎಲ್ಲಿ ನಾವು ಅಪಾಯಿಂಟ್‌ಮೆಂಟ್ ಮಾಡಬೇಕೋ ಅಲ್ಲಿ ಅಪಾಯಿಂಟ್‌ಮೆಂಟ್ ಮಾಡಿಲ್ಲ ಎಂದು ಇದರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾಯ್ದೆಯಲ್ಲಿ ಅವಕಾಶ ಇದೆ. ಆದರೆ ತಾವು ಇಲ್ಲಿ ಏನು ಮಾಡಿದ್ದೀರಿ ಎಂದರೆ...

Clause 5 : Penalty.

"5. Penalty. - If any appointing authority makes an appointment or any authority making admission to course of study in a University or any educational institution makes admission in contravention of the provisions of this Act or rules made thereunder, he shall be punishable with fine which may extend up to Rupees one thouasnd and imprisonment not exceeding six months."
ಇಲ್ಲಿ ನೀವು ಹೇಳುತ್ತಿರುವುದು ಸಂತೋಷ. ಈ ಕಾನೂನಿಗೆ ವಿರುದ್ಧವಾಗಿ ಯಾರು ಅಪಾಯಿಂಟ್‌ಮೆಂಟ್ಸ್ ಮಾಡುವುದಿಲ್ಲ, ಅವರ ವಿರುದ್ಧ ಪೆನಾಲ್ಟಿ ಕ್ಲಾಸನ್ನು ಇಂಟ್ರಡ್ಯೂಸ್ ಮಾಡಿದರೆ ಬಹಳ ಸಂತೋಷ. ಈಗ ಪೆನಾಲ್ಟಿ ಇರುವುದಕ್ಕಿಂತ ಇನ್ನು **harsh** ಆಗಿರಬೇಕಾಗಿತ್ತು. ಇವತ್ತು ಒಂದು ಸಾವಿರ ರೂಪಾಯಿ ದಂಡ ಮತ್ತು ಇಂಪ್ರಿಸನ್‌ಮೆಂಟ್ ಇದನ್ನು ಸ್ಪಷ್ಟವಾಗಿ ಬರೆಯಬೇಕಾಗಿತ್ತು. ರಿಗರಸ್ ಇಂಪ್ರಿಸನ್‌ಮೆಂಟ್ ಮಾಡುತ್ತೇವೆ ಎಂದು ಬರೆಯಬೇಕಾಗಿತ್ತು. ಏಕೆಂದರೆ ಇವತ್ತು ಎಷ್ಟೋ ಕಾಯ್ದೆ ಕಾನೂನನ್ನು ತಂದರೂ ಸಹಾ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರಿಗೆ ಇವತ್ತು ಎಲ್ಲಿ ಅವರಿಗೆ ಅಪಾಯಿಂಟ್‌ಮೆಂಟ್ಸ್ ಆಗಬೇಕಾಗಿತ್ತೋ ಅದು ಆಗುತ್ತಿಲ್ಲ. ಅಥವಾ ನೀವು ಇಲ್ಲಿ ಸ್ಪಷ್ಟವಾಗಿ ಇದನ್ನು ಹೇಳಬೇಕಾಗಿತ್ತು, ರಿಗರಸ್ ಇಂಪ್ರಿಸನ್‌ಮೆಂಟ್ ಎಂದು ಹೇಳಬೇಕಾಗಿತ್ತು. ಅದನ್ನು ನೀವು ಹೇಳಿಲ್ಲ. ಎರಡನೆಯದು **Cognizance of offences.**

"6. Cognizance of offences. No prosecution for an offence under this Act shall be instituted except by, or with the sanction of the State Government." Why not the affected party ? **5 15 P.M.**

ಒಂದು ವೇಳೆ ಎಜುಕೇಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ಎಸ್. ಸಿ., ಎಸ್.ಟಿ. ಯವರಿಗೆ, ಬಿ. ಟಿ. ಯವರಿಗೆ ರಿಜರ್‌ವೇಷನ್ ಪ್ರಕಾರ ಅವರಿಗೆ ಅಪಾಯಿಂಟ್‌ಮೆಂಟ್ ಸಿಗಲಿಲ್ಲವಾದರೆ

Why you have not given him a right to prosecute the Management ?

ಇದು ಇಲ್ಲವಾದರೆ ನಿಮ್ಮ ಮನಸ್ಸಿಗೆ ಬಂದವರನ್ನು ಪ್ರಾಸಿಕ್ಯೂಟ್ ಮಾಡುವುದು, ಬೇರೆಯವರನ್ನು ಬಿಡುವುದು ಆಗುತ್ತದೆ. ಇಲ್ಲಿ

Your intentions are not very clear. You please see Section 11 :

"Protection of action taken in good faith. No suit, prosecution or other legal proceeding shall lie against any person for anything which is done in good faith or intended to be done under this Act".

What is your intention in Clause 5 you have taken it away by Clause 11. The Government's intention is not clear.

ಮಾನ್ಯ ಶಿವಣ್ಣನವರೆ ಈ ವಿಧೇಯಕವನ್ನು ತಂದಿದ್ದೀರಲ್ಲಾ, ನೀವು ಸರಿಯಾಗಿ ಓದಿದ್ದೀರೋ ಇಲ್ಲವೋ? ಸೆಕ್ಷನ್ 5 ರ ಪ್ರಕಾರ ಯಾರು ಈ ಅಪಾಯಿಂಟ್‌ಮೆಂಟ್ ಕಾಯಿದೆಯ ಪ್ರಕಾರ ಮಾಡುವುದಿಲ್ಲ. ಇವರ ಮೇಲೆ ಕ್ರಮ ಆದರೆ ಸೆಕ್ಷನ್ 11 ರಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳು ನಮಗೆ ಸಂತೋಷವಾಗುತ್ತದೆ.

Why do you want this Section ? Withdraw this section. Anybody can come under this 'good faith'.

Please try to understand. It is discretion of the Government. What is good faith ? Please read the provision again.

"No suit, prosecution or other legal Proceeding shall lie against any person for anything which is done in good faith or intended to be done under this Act".

Intended : If it is done in good faith or intended to be done in good faith, who has to decide it ? Again; you have to decide it. Why this Section is incorporated ? What necessity is there ? This is done to help whom ? Let us strict. Let us be specific. Let us say that those who are contravening the provisions of this Act will be punished. Then I can understand the intentions of the Government and I will congratulate.

Shri M. Veerappa Moily :- One thing you should not forget that after all, we are not dealing with the criminals here. In discharge of duties, some officers act under the Act. Whether he has violated it or not, there ahould be a finding. Supposing in discharge of a duty a particular officer has acted today, he has to be protected. You know very well that the lawyers interpret the law in the court. The provisions of the law will also be interpreted by the respective officers and it will be interpreted even by the Ministers. Suppose in the process just because you interpreted the law with bonafide intention, he has done with a criminal intention, interpreting law after all you know very well, you are also an eminent lawyer. We interpret law. The officers also, while discharging their duties, are intended to interpret law, interpret the provisions of law, and the rules thereunder. While interpreting the act and rules, you cannot straight away construe and say, 'you have committed an offence under this Act.' To protect him under these circumstances this is provided. You cannot just prosecute a person for having wrongly interpreted a law with bonafied intention, the particular intentions of the Act. It can happen in a military rule and it cannot happen in a civil administration. After all, military rule will have to be strictly interpreted but under the General Clauses Act it seff, a man is entitled

to interpret a law. If you don't provide this, do you know what will happen ? No officer can act under any provisions of the law. He will be well protected of his rights. He will not act and no initiative will be there. So, I think by removing that Mr. Despande you will just make officers ineffective, we will make them defunct and no officer can function in any administration if that kind of a protection is not provided under the Act.

SRI R. V. Deshpande :- You are defending the Officers. If any Officer fails' in his duties, if he is wrong I can understand here I am talking about educational institutions. Please see Section 5 it reads 'If any appointing authority makes an appointment or any authority making admission to course of study in a University or any educational institution makes admission in contravention of the provision of this Act or rules made thereunder, he shall be punishable....

Here I am not dealing with the Officers. There are private aided, unaided educational institutions I am talking about them. Please try to understand. They commit mistakes. Again by introducing Section 11 you are trying to help them. I am not talking about the Officers. I am trying to lay my hands on educational institutions where suppose they commit wrong and how do you want to prosecute them. Please go through Section 11 that is a protection given to them.

Section 11 reads ; Protection of action taken in good faith :-

No suit, prosecution or other legal proceedings shall lie against any person for anything which is done in good faith or intended to be done under this Act....

So, what about institutions. Even with regard to penalty what does it say 'If any appointing authority makes an appointment of any authority making admission to course of study......he shall be punishable....

Here I would like to know 'he' means educational institution according to you. Suppose there is a

educational institution there is a Committee of 5 persons responsible for appointing person and that Committee makes breach of this Act. Can you under Section 5 prosecute them or can you under Sec.11 give them protection saying that they did it in good faith and leave them because it says 'he' it does not cover Institutions. So, I would urge the Hon'ble minister to please look into this whether Educational Institutions could be included and if you say it is enough, of course it might be an oversight, but if you say it is enough to withdraw Section 11 and you should under Section 5 include educational institutions. Educational Institutions should also be prosecuted. You have to include them but you have not done.

Comming to the next point Constitution of Standing Committee and its functions. According to this, review of the implementation of the provisious of this Act and the rules made thereunder as far as possible twice a year. ವರ್ಷದಲ್ಲಿ ಎರಡು ಸಾರಿ ಸಮಿತಿ ಸೇರಬೇಕಾದರೆ, ನಿಜವಾಗಿ ಇದನ್ನು ಹೇಳುವ ಅವಶ್ಯಕತೆ ಇರಲಿಲ್ಲ. ಇಡೀ ದೇಶದಲ್ಲಿ ಇದರ ಬಗ್ಗೆ ಒಂದು ದೊಡ್ಡ ಮಹಾಯುದ್ಧ ನಡೆಯುತ್ತಿದೆ. ಹರಿಜನ ಗಿರಿಜನ, ಹಿಂದುಳಿದವರ ಬಗ್ಗೆ ನಿಜವಾಗಿಯೂ ಮಾನ್ಯ ಮುಖ್ಯ ಮಂತ್ರಿಗಳು ಈ ಕಮಿಟಿ ಮಾಡಬೇಕಾಗಿತ್ತು.

And then the Committee headed by Social Welfare Minister. If the Government intention to give importance and see that this is properly implemented the Chief Minister should have been the Chairman of this Committee. This is my suggestion. Then, this Act will come into force after the appointed date. It shall come into force on such date as the State Government may, by notification, appoint... ಅಪಾಯಿಂಟೆಡ್, ಅಂದರೆ ನೋಟಿಫಿಕೇಷನ್ ಆದರೆ ಇದು ನೀವು ನಿಜವಾಗಿಯೂ ಹೇಳಬೇಕಾಗಿತ್ತು. Your intentions should have been clear. You should have taken steps that this Act will come into effect from 1st January 1991

ಅದಕ್ಕೆ ಸ್ಕೋಪ್ ಇಲ್ಲ. ಮಾನ್ಯ ಮಂತ್ರಿಗಳಾದ ಶಿವಣ್ಣನವರು ಇದರ ಉದ್ದೇಶವನ್ನು ಹೇಳಿದ್ದಾರೆ. ನಾಳೆ ನಾವು ಹೋದ ಮೇಲೆ ಅವರು ನೋಟಿಫಿಕೇಷನ್‌ನ್ನು ಇಷ್ಯೂ ಮಾಡಿದರೆ 'ನೀವು' ಏನು ಮಾಡುತ್ತೀರಿ ? Whatever incorporated in this Act such an important Legislation -this Act will come into effect at a particular date which you have not said... ಮೊದಲು ಸರ್ಕಾರದ ಕಡೆಯಿಂದ ಒಂದು ರಿಪೋರ್ಟ್‌ನ್ನು ಇಟ್ಟುಕೊಳ್ಳಿ. ಯಾವಾಗ ಬೇಕಾದರೂ ನೋಟಿಫೀಕೇಷನ್‌ನ್ನು ಇಷ್ಯೂ ಮಾಡಬಹುದು. You may forget to issue the notification ... ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಏನೂ ಇಲ್ಲ.........

ಶ್ರೀ ಎಂ. ವೀರಪ್ಪ ಮೊಯಿಲಿ :- ತಾವೂ ಕೂಡ ಮಂತ್ರಿಗಳಾಗಿ ಇಲ್ಲಿ ಕೆಲಸ ಮಾಡಿದ್ದೀರಿ. ನಾವು ಇಲ್ಲಿ ಒಂದು ಬಿಲ್ಲನ್ನು ಪಾಸ್ ಮಾಡುತ್ತೇವೆ. Either it has to go for assent of the Governor or it has to go to the President. I think in this case it is the President of India. You know already number of Bills are pending for assent. You have functioned as a Minister, you have sufficient experience in the Legislature ರಾಷ್ಟ್ರಪತಿಗಳು ಇಂಥ ತಾರೀಖಿನಲ್ಲೇ, ಇಂಥ ತಿಂಗಳಲ್ಲೇ ತಮ್ಮ ದಸ್ಕತ್‌ನ್ನು ಹಾಕುತ್ತಾರೆ ಎಂದು ಯಾವ ಗ್ಯಾರಂಟಿ ಇದೆ ? ಇದು ತಮಗೂ ಕೂಡ ಗೊತ್ತಿದೆ. You have functioned as

a Minister... I need not tell you... ಇದು ಜನವರಿ ಮೊದಲನೇ ತಾರೀಖಿನಿಂದಲೇ ಎಫೆಕ್ಟ್ ಆಗಬೇಕೆಂದು ತಾವು ಇಲ್ಲಿ ಬರೆದರೆ again I have to come back here with one more amendment then only I can implement... ಇದು ಜನವರಿ 1ನೇ ತಾರೀಖಿನಿಂದಲೇ ಆಗಬೇಕೆಂದು ನೀವು ಡೇಟನ್ನು ಹಾಕಿ ಕಳುಹಿಸಿದಾಗ ಅದು ಆ ತಾರೀಖಿ ನೊಳಗೆ ಪ್ರೆಸಿಡೆಂಟ್ ರವರಿಂದ ಸಹಿ ಆಗಿ ಬರದಿದ್ದರೆ ಆಗ ತಮ್ಮ ಉದ್ದೇಶ ಏನಿದೆ ಅದು ಸಾರ್ಥಕ ವಾಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :– ನಾನು ಮೊದಲೇ ಹೇಳಿದೆ I know the difficulties of the Government. What I have said is because it is an important legislation you should clear all these things... Generally when bills are brought I do understand the difficulties.

ಮತ್ತೊಂದು ವಿಚಾರವನ್ನು ಹೇಳುವುದಾದರೆ ಬ್ಯಾಕವರ್ಡ ಕ್ಲಾಸಿಗೆ ಸಂಬಂಧಪಟ್ಟಂತೆ ಡಾ. ರೆಡ್ಡಿ ಕಮಿಷನ್ ವರದಿಯ ಬಗ್ಗೆ ನೀವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಮಂಡಲ್ ಕಮಿಷನ್ ಬಗ್ಗೆ ನಿಮ್ಮ ಅಭಿಪ್ರಾಯ ಏನಿದೆಯೋ ಅದು ನಮಗೆ ಗೊತ್ತಿಲ್ಲ. ಡಾ. ರೆಡ್ಡಿ ಕಮಿಷನ್ ರಿಪೋರ್ಟ್ ಬಗ್ಗೆ ನಿಮ್ಮ ಅಭಿಪ್ರಾಯ ಏನಿದೆಯೋ ಅದು ನಮಗೆ ಗೊತ್ತಿಲ್ಲ. ಏಕೆಂದರೆ ಬ್ರಾಹ್ಮಣರು, ಗೌಡರು, ವೈಶ್ಯರನ್ನು ಬಿಟ್ಟರೆ ಉಳಿದವರೆಲ್ಲಾ ಬ್ಯಾಕ್‌ವರ್ಡ್ ಕ್ಲಾಸ್ ಆಗಿದ್ದಾರೆ. ಆದರೆ ಅವರೆಲ್ಲರಿಗೂ ಈ ಬೆನಿಫಿಟ್ ಸಿಕ್ಕುತ್ತಿದೆಯೋ ? ಇದು ನ್ಯಾಯವಾದ ಬೆನಿಫಿಟ್ ಏನು ? ಡಾ. ರೆಡ್ಡಿ ಕಮಿಷನ್‌ನ ಮೇಲೆ ಆದಷ್ಟು ಬೇಗ ಒಂದು ನಿರ್ಣಯ ವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ರೀತಿ ಒಂದು ನಿರ್ಣಯವನ್ನು ತೆಗೆದುಕೊಂಡ ನಂತರ ಈ ಬಿಲ್ಲನ್ನು ನೀವು ಇಂಟ್ರಡ್ಯೂಸ್ ಮಾಡಿದ್ದರೆ ಆಗ ಇದು ಫೇಲ್ ಆಗುತ್ತದೆ. ಬ್ಯಾಕ್‌ವರ್ಡ್ ಕ್ಲಾಸ್‌ನ ಸ್ಥಾನ ಮಾನ ಏನು ಕೊಡುತ್ತೀರಿ ಎಂಬುದು ಗೊತ್ತಾಗುತ್ತಿತ್ತು. ಆದ್ದರಿಂದ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಮಾನ್ಯ ಸಚಿವರು ಈ ಬಿಲ್ಲನ್ನು ಏನು ಇಂಟ್ರಡ್ಯೂಸ್ ಮಾಡಿದ್ದಾರೆ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. Your intentions may be good and I don't dispute that... ಇದನ್ನು ಯೋಚನೆ ಮಾಡಿ ಹೇಳುವುದಾದರೆ, "ಇನ್‌ಸ್ಟಿಟ್ಯೂಷನ್ಸ್" ಎನ್ನುವ ಪದ ಇದರಲ್ಲಿ ಇರಬೇಕಾಗುತ್ತದೆ. ಸೆಕ್ಷನ್ 11 ಎಂದು ಏನು ಹೇಳಿದ್ದೀರಿ 'good faith' is it to protect those persons who breach this Act... ಇದನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ. ಅನಂತರ ಮಾನ್ಯ ಮುಖ್ಯಮಂತ್ರಿಗಳು ಈ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡಬೇಕೆಂದು ಸಲಹೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಜಕನೂರ (ಕಾಗವಾಡ) :– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಕಾಯಿದೆ ಸಚಿವರು ಸದನದ ಮುಂದೆ ಮಂಡಿಸಿರತಕ್ಕಂಥ ಈ ಬಿಲ್ಲನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯ ಸುತ್ತೇನೆ.

ವಿರೋಧ ಪಕ್ಷದ ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳಿದ್ದನ್ನು ನಾನು ಗಮನಿಸಿದ್ದೇನೆ. ಅವರು ಬಹಳ ಫೋರ್ಸಿಬಲ್ ಆಗಿ ಹೇಳಿದರು. ಅವರನ್ನು ಪ್ರೊಟೆಕ್ಟ್ ಮಾಡುವ ಸಲುವಾಗಿ ನೀವು ಇದನ್ನು ಮಾಡಿದ್ದೀ ರೆಂದು ಹೇಳಿದರು. ಆದರೆ ಇದು ಹಾಗಲ್ಲ. ಕ್ರಿಮಿನಲ್ಸ್‌ಗೆ ಪನಿಷ್‌ಮೆಂಟ್‌ನ್ನು ಕೊಡತಕ್ಕ ಉದ್ದೇಶ ಇದರಲ್ಲಿದೆ. ತಾವು ಒಂದು ಎಜುಕೇಷನ್ ಇನ್‌ಸ್ಟಿಟ್ಯೂಷನ್‌ನ್ನು ನಡೆಸುತ್ತಿದ್ದೀರಿ. ತಮಗೂ ಗೊತ್ತಿದೆ. ಬಹಳಷ್ಟು ಜನರಿಗೆ ಇದು ಗೊತ್ತಿಲ್ಲದೆ ತಪ್ಪಾಗುತ್ತಿದೆಯೋ ಏನೋ. ಆದ್ದರಿಂದ ಇದಕ್ಕೆ ಸ್ವಲ್ಪ ಸ್ಕೋಪ್ ಇರಬೇಕೆಂದು ನಾನು ಹೇಳುತ್ತಿದ್ದೇನೆಯೇ ಹೊರತು......

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಒಂದು ವಿಚಾರವನ್ನು ಮಾನ್ಯ ದೇಶಪಾಂಡೆಯವರಿಂದ ನಿರೀಕ್ಷಣೆ ಮಾಡುತ್ತಿದ್ದೆ. ಪಬ್ಲಿಕ್ ಪೀಪಲ್‌ಗೆ ಇನ್‌ಟೆನ್‌ಷನ್ ನಿಮ್ಮಿಂದ ಪ್ರಾರಂಭ ವಾಗಬೇಕು. ಬಹುಶಃ ನಿಮ್ಮ ಮಿನಿಸ್ಟ್ರಿಯಿಂದ ಪ್ರಾರಂಭಮಾಡಿ ಇದು ಅಪ್ಲೈಮಾಡಿ ಎಂದು ಹೇಳಿದ್ದರೆ I would have appreciated that sentiment. ಬಹುಶಃ ಅಲ್ಲಿಂದ ಪ್ರಾರಂಭ ಮಾಡಿದ್ದರೆ ಕೆಳಗಿನದೆಲ್ಲ ಸರಿಯಾಗುತ್ತಿತ್ತು. We want all safeguards ಅಲ್ಲಪ್ಪ, ನಾಳೆ ಏನೋ ಒಂದು ಒಳ್ಳೆಯ ಉದ್ದೇಶದಿಂದ ಮಾಡಿರೋದು ಅದಕ್ಕೆ ನಮ್ಮನ್ನು ಒಮ್ಮೆಲೇ ಜೈಲಿಗೆ ಕಳುಹಿಸುತ್ತೀರಾ ಎಂದು ಹೇಳಿ ಎಲ್ಲರೂ ಪ್ರಶ್ನೆ ಮಾಡಿರುತ್ತಿದ್ದರು. ಅಧಿಕಾರಿಗಳು ಪಾಪ ಸದನವಲ್ಲಿ ಮೂಕರಾಗಿರುತ್ತಾರೆ. ಅವರಿಗೆ ಮಾತನಾಡಲಿಕ್ಕೆ ಇಲ್ಲಿ ಅವಕಾಶವಿಲ್ಲ. ಅದಕ್ಕೆ ಏನು ಮಾಡುತ್ತಾರೆ ಒಂದು ಸೆಕ್ಷನ್ ಹೇಳಿ ಎಲ್ಲದಕ್ಕೂ ಅವರನ್ನು ದೂರುವುದಕ್ಕೆ ಪ್ರಾರಂಭ ಮಾಡುತ್ತೇವೆ. I am just telling you. All of us are responsible for non-implementation of this reservation order. All of us-

should be responsible. If we had pure conviction, we would have done it. All of us are shirking our responsibilities.

ಶ್ರೀ ಆರ್. ವಿ. ದೇಶಪಾಂಡೆ :- ತಮ್ಮ ಕಲ್ಪನೆ ತಪ್ಪಾಗುತ್ತಿದೆ. I am not trying to lay hands on the Officers. What about educational institutions? I am talking about private educational institutions both aided and unaided; Universities; what about them? As a former Law Minister, you kindly go through section 5. You go deep into it. I am happy about that provision. You have to bring it into practice.

Sri. M. Veerappa Moily: Subject to correction according to me this is the first step taken in the whole of the country. ಇದು ಪ್ರಥಮ ಹೆಜ್ಜೆ. ಬಹುಶಃ ಈ ದೇಶದಲ್ಲಿ ಯಾವ ರಾಜ್ಯದಲ್ಲೂ ಕೂಡ ಇಂಥ ಒಂದು ಲೆಜಿಸ್ಲೇಷನ್ ತಂದಿಲ್ಲ. We have brought this According to me. ಇಂಥ ಒಂದು ಲೆಜಿಸ್ಲೇಷನ್ ತಂದು ರಿಸರ್ವೇಷನ್ ಆರ್ಡರ್‌ನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ಪನಿಷ್‌ಮೆಂಟ್ ಎನ್ನತಕ್ಕಂಥದ್ದು ಏನು ಇದೆ ಇದು ಒಂದು ದೊಡ್ಡ ಹೆಜ್ಜೆ. ರಿಸರ್ವೇಷನ್ ಎಂದು ನಾವು ತೆಗೆದುಕೊಳ್ಳುವಾಗ ಅದು ಏನಾಗುತ್ತದೆ ಎನ್ನುವುದೇನೂ ಇಲ್ಲ ಅದನ್ನು ಇಂಪ್ಲಿಮೆಂಟ್ ಮಾಡುವಾಗ ಇವರ ಬಗ್ಗೆ ಎಫೆಕ್ಟೀವ್‌ಆಗದಿದ್ದರೆ We can come back and go more deeply. But I must tell you that. this is the most innovative step taken by this Government. For the first time the most original ideas which have been brought up.

ಶ್ರೀ ಎ. ಬಿ. ಜಕನೂರ :- ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಆರ್. ವಿ. ದೇಶಪಾಂಡೆಯವರು ಹೇಳಿದ ಬಗ್ಗೆ ಹೇಳುತ್ತಿದ್ದೆ. ಅಷ್ಟರೊಳಗೆ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು., ಅದನ್ನೇ ನಾನು ಹೇಳ ಬಯಸುತ್ತಿದ್ದೇನೆ, ಇದು ಒಂದು ಉತ್ತಮವಾದ ಕಾಯಿದೆ. ಇದನ್ನು ತರುವುದಕ್ಕೆ ಕಾರಣವೇನೆಂದರೆ ಬಹಳ ಸ್ಪಷ್ಟವಾಗಿ ವಿಚಾರವನ್ನೂ ಕೂಡ ಹೇಳಿದ್ದಾರೆ. ಏತಕ್ಕೆಂದರೆ ಇಲ್ಲಿಯತನಕ ರಿಸರ್ವೇಷನ್ ಇಟ್ಟುಕೊಂಡು ಬಂದರೂ ಸಹಿತ ಕೆಲವೊಂದು ಸರ್ಕಾರಿ ನೌಕರರಾಗಲಿ, ಅಥವಾ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್‌ಗಳಾಗಲಿ, ಅಥವಾ ಕೋ ಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಾಗಲಿ ಇಂಟರೆವ್ಯೂ ಕರದಾಗ ಹರಿಜನರು ಸಿಗಲಿಲ್ಲ, ಗಿರಿಜನರು ಸಿಗಲಿಲ್ಲವೆಂದು ಹೇಳಿ ಈ ಕಾರಣಕ್ಕಾಗಿ ಇಲ್ಲಿಯತನಕ ಬಿಟ್ಟುಕೊಳ್ಳುತ್ತಾ ಬಂದಿರುತ್ತಾರೆ. ಬಹಳಷ್ಟು ಬಿಟ್ಟಿದ್ದಾರೆ. ಇದರಿಂದಾಗಿ ಬಹಳಷ್ಟು ಬ್ಯಾಕ್‌ಲಾಗ್‌ನ್ನು ತುಂಬದಂತಾಗಿದೆ. ಅದರ ಸಲುವಾಗಿ ಈ ಒಂದು ಕಾಯಿದೆ ತಂದು ಅಂಜಿಕೆ ಇರಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ನಾವು ಅಭ್ಯರ್ಥಿಗಳನ್ನು ತುಂಬದಿದ್ದರೆ ಕ್ರಿಮಿನಲ್ ಕೇಸ್ ಆಗುತ್ತದೆನ್ನುವ ಅಂಜಿಕೆಯ ದೃಷ್ಟಿಯಿಂದ ಮಾಡಿದ್ದಾರೆ. ಮಾನ್ಯ ಆರ್. ವಿ. ದೇಶಪಾಂಡೆಯವರು ಹೇಳಿದ ಹಾಗೆ ಪೆನಾಲ್ಟಿ ಕ್ಲಾಸ್ (11) ರ ಪ್ರಕಾರ ಆಫೀಸರನ್ನು ಪ್ರೊಟೆಕ್ಟ್ ಮಾಡಬೇಕೆಂದಲ್ಲ. ಎಷ್ಟೋ ಇನ್‌ಸ್ಟಿಟ್ಯೂಷನ್ ಗಳಲ್ಲಿ ಸಹ ಒಮ್ಮೊಮ್ಮೆ ತಪ್ಪಾಗುವಂಥ ಸಂದರ್ಭಗಳಿರುತ್ತದೆ. ತಪ್ಪಾದಾಕ್ಷಣ ಅದು ಒಂದು ದೊಡ್ಡ ಅಪರಾಧ ವೆಂದು ಅವರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಹೇಳಿ ಈ ಕಾನೂನ್ನು ಇಟ್ಟಿದ್ದಾರೆ. ಕೆಲವು ದಿವಸಗಳಾದಮೇಲೆ ಇದನ್ನು ತೆಗೆಯಬಹುದು. ಮತ್ತೆ ಈ ಕಾಯಿದೆಯಿಂದ ಎಷ್ಟೋ ಸಂಸ್ಥೆಗಳಲ್ಲಿ ಅಧಿಕಾರಿಗಳನ್ನು ಅಪಾಯಿಂಟ್ ಮಾಡುವ ಅಥಾರಿಟಿ ಎಂದು ಏನು ಹೇಳುತ್ತೇವೆ. ಅವರಿಗೆ ಒಂದು ಅಂಜಿಕೆ ಇರುತ್ತದೆ. ಅವರು ಇನ್ನು ಮುಂದೆ ಅಪಾಯಿಂಟ್ ಮಾಡುವರಲ್ಲವೆನ್ನುವ ಭಾವನೆಯಿಂದ ಈ ಬಿಲ್ಲನ್ನು ಸರ್ಕಾರ ತಂದಿದೆ. ನಾನು ಇದನ್ನು ಸ್ವಾಗತಿಸು ತ್ತೇನೆ. ಆದರೆ ನಾಳೆ ದಿವಸ ಕೋರ್ಟಿಗೆ ಹೋದರೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿದರೆ ಉತ್ತಮ ಎಂಬ ದೃಷ್ಟಿಯಿಂದ ಸಲಹೆ ಕೊಡಬಯಸುತ್ತಿದ್ದೇನೆ. : Section 4 says as follows

Reservation of appointments or posts etc., (1): After the appointed day, while making appointments to any office in a civil service of the State of Karnataka or to a Civil post under the State of Karna aka appointments or posts shall be reserved for the members of the Scheduled Castes, Scheduled Tribes and other Backward Classes to such extent and in such manner as may be specified from time to time in the order made by the Government under clause (4) of article 16 of the Constitution of India.

(2) The provisions of the said order made under clause (4) of Article 16 of the Constitution shall be deemed to be an order made under this Act and shall mutatis mutandis apply to a service or post in an establishment in public sector.

"In an establishment in public sector"... ಎಂದು ಡೆಫನಿಷನ್‌ನಲ್ಲಿ ಕೊಟ್ಟಿದ್ದಾರೆ. ಕೋ-ಆಪರೇಟಿವ್ ಸೊಸೈಟಿ, ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ ವಗೈರೆ ಕೊಟ್ಟಿದ್ದಾರೆ. ಇದರಿಂದ ಸಬ್‌ಸೆಕ್ಷನ್-1 ಏನು ಫೋರ್ಸ್‌ಗೆ ಬರುತ್ತದೆ ಅದು ಸಬ್‌ಸೆಕ್ಷನ್ 2ಕ್ಕೆ ಬರುವುದಿಲ್ಲ. ಸಬ್‌ಸೆಕ್ಷನ್ 4 ರಲ್ಲಿ ಸ್ಪಷ್ಟವಾಗಿ ಹೇಳ ಬೇಕಾಗಿತ್ತು. ಹಾಸ್ಪಿಟಲ್‌ಗಳು ಬಂದಿಲ್ಲ, ಕೋಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳು ಬಂದವು. ದೊಡ್ಡ ದೊಡ್ಡ ಆಸ್ಪತ್ರೆಗಳು ಇವೆ. There are so many big hospitals and so many employees are there. you have not touched that point. Please see whether you can include them under Section 4. Sub-section 3 comes into picture only for annual admissions. ಅಡ್ಮಿಷನ್ಸ್ ಬಗ್ಗೆ ಸಬ್‌ಸೆಕ್ಷನ್-1ರಲ್ಲಿ ಕೂಡ ಹಾಕಿದ್ದೀರಿ. ಇದು ವ್ಯತ್ಯಾಸ ವಾಗುತ್ತದೆ. ಇದನ್ನು ನಿಧಾನವಾಗಿ ನೋಡಬೇಕು. ಗಡಿಬಿಡಿಯಿಂದ ಪಾಸ್ ಮಾಡಿ ಮತ್ತೆ ಅಮೆಂಡ್‌ಮೆಂಟ್ ಮಾಡುವುದು ಸರಿಯಲ್ಲ. ವಿವರವಾಗಿ ಚರ್ಚೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Section 7 reads as follows: "Maintenance of records and submissions of annual report etc. (1) Every appointing authority and every authority making admissions to a course of study in a University or any educational institution having an establishment in public sector shall maintain such records and shall furnish to the State Government an annual report in such form and in such manner, as may be prescribed." ಇದನ್ನು ಸ್ವಲ್ಪ ದಯವಿಟ್ಟು ನೋಡಿ. ಹೀಗಾಗಿ ಈ ಲೂಪ್‌ಹೋಲ್ಸ್‌ನಿಂದ some of the institutions may get rid of it. ಇದು ಬರುವುದಿಲ್ಲ, ಇದನ್ನು ಹಾಕಿಲ್ಲವೆಂದು ನಾಳೆ ಕೋರ್ಟಿನಲ್ಲಿ ತೊಂದರೆಯಾಗಬಹುದು. ಈ ದೃಷ್ಟಿಯಿಂದ ನೋಡಬೇಕೆಂದು ಹೇಳಿ ಇದನ್ನು ನಾನು ಸ್ವಾಗತಿಸುತ್ತೇನೆ.

† ಶ್ರೀ ಬಿ. ಎಚ್. ಬನ್ನಿಕೋಡ್ (ಹಿರೇಕೆರೂರ) :– ಮಾನ್ಯ ಅಧ್ಯಕ್ಷಿಣಿಯವರೆ, ಈ ಕಾನೂನು ತಂದ ಉದ್ದೇಶ, ಹರಿಜನ ಗಿರಿಜನರಿಗೆ, ಹಿಂದುಳಿದವರಿಗೆ ಸಂಪೂರ್ಣವಾಗಿ ಮೀಸಲಾತಿ ಸಿಗಬೇಕು; ಯಾರಿಗೂ ಅದನ್ನು ತಪ್ಪಿಸಬಾರದು, ತಪ್ಪಿಸಿದವರಿಗೆ ಕಾನೂನು ಬದ್ಧವಾಗಿ ದಂಡ, ಶಿಕ್ಷೆ ಮಾಡಬೇಕೆಂಬ ಉದ್ದೇಶದಿಂದ ತಂದಿದ್ದಾರೆ. ಯಾರು ರಿಸರ್ವೇಷನ್ ಸಿಸ್ಟಂ ಪ್ರಕಾರ ನಡೆದುಕೊಳ್ಳುವುದಿಲ್ಲ ಅಥವಾ ಆ ಒಂದು ಅವಕಾಶವನ್ನು ತಪ್ಪಿಸುತ್ತಾನೆ ಅವರಿಗೆ ಶಿಕ್ಷೆ, ದಂಡ ಕೊಡುವ ಕಾನೂನು ಏನು ತಂದಿದ್ದಾರೆ ಅದರ ಜೊತೆಗೆ ಯಾರು ರಿಸರ್ವೇಷನ್ ಸೌಲಭ್ಯ ಪಡೆದಂತಹ ಶ್ರೀಮಂತ ಹರಿಜನ ಗಿರಿಜನರು, ಮಂತ್ರಿ ಮಾನ್ಯರು ಇದ್ದಾರೆ ಅವರಿಗೆ ಪುನಃ ಆ ಸೌಲಭ್ಯ ಸಿಗಬಾರದು, ಹಳ್ಳಿಯಲ್ಲಿರುವ ಹರಿಜನ ಗಿರಿಜನರಿಗೆ ಮಾತ್ರ ಸಿಗಬೇಕೆಂಬುದನ್ನು ಸೇರಿಸಿದ್ದರೆ ಉತ್ತಮವಾಗುತ್ತಿತ್ತೆಂದು ನಾನಾದರೂ ಹೇಳಬಯಸುತ್ತೇನೆ. ಹಿಂದುಳಿದವರು. ಹರಿಜನ ಗಿರಿಜನರು, ಬಡವರು ಏನಿದ್ದಾರೆ ಅವರಿಗೆ ಕೊನೆಯ ಪಕ್ಷ ಒಂದು ಸಾರಿಯಾದರೂ ಅವಕಾಶ ಕಲ್ಪಿಸಬೇಕು. ನಿಜವಾದ ಮೀಸಲಾತಿ ಉದ್ದೇಶ ಸರ್ಕಾರಕ್ಕೆ ಇದ್ದ ಹಾಗೆ ಇಲ್ಲ. ಸರ್ಕಾರದಲ್ಲಿರತಕ್ಕ ಶ್ರೀಮಂತರಿಗೆ ಮಾತ್ರ ಇದರ ಸೌಲಭ್ಯ ಸಿಗುವ ಉದ್ದೇಶ ಈ ಕಾನೂನಿನ ಹಿನ್ನೆಲೆಯಲ್ಲಿ ಇದೆ ಎಂದು ಭಾವಿಸುತ್ತೇನೆ. ಯಾರು ಮೀಸಲಾತಿ ಸೌಲಭ್ಯ ಪಡೆದಿದ್ದಾರೆ ಅವರನ್ನು ಹೊರತುಪಡಿಸಿ, ಆ ಸೌಲಭ್ಯವನ್ನು ಪಡೆಯದೆ ಇರತಕ್ಕವರಿಗೆ ಕೊಡುವ ತಿದ್ದುಪಡಿಯನ್ನು ಕಾನೂನಿನಲ್ಲಿ ಸೇರಿಸಿ ಹಳ್ಳಿಯಲ್ಲಿರತಕ್ಕ ಬಡ ಹರಿಜನ ಗಿರಿಜನರಿಗೆ ಮೀಸಲಾತಿ ಸೌಲಭ್ಯ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಕಾನೂನು ಮಾಡುವವರಿಗೆ ಮಾತ್ರ ಇದರ ಪ್ರಯೋಜನವಾಗಬೇಕೆಂಬ ಉದ್ದೇಶ ಇರಬಾರದು. ಅದನ್ನು ತೆಗೆದು ಹಾಕಿ ಬಡವರಿಗೆ ಆ ಸೌಲಭ್ಯ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಚಿನ್ನಪ್ಪರೆಡ್ಡಿ ಆಯೋಗ ಮತ್ತು ಮಂಡಲ ಆಯೋಗದ ಬಗ್ಗೆ ಸರ್ಕಾರ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಯಾರು ಹರಿಜನ ಗಿರಿಜನರು, ಯಾರು ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಮತ್ತು ಯಾರು ಹಿಂದುಳಿದವರು ಎಂಬ ಬಗ್ಗೆ ಸರ್ಕಾರ ಇನ್ನೂ ನಿರ್ಣಯ ಕೈಗೊಂಡಿಲ್ಲ. ಇವತ್ತು ಹರಿಜನ ಗಿರಿಜನರನ್ನು ಅಥವಾ ಪರಿಶಿಷ್ಟ ಜಾತಿಯವರನ್ನು ನಿರ್ದಿಷ್ಟಪಡಿಸದೆ, ಹಿಂದುಳಿದ ಜನಾಂಗದವರನ್ನು ನಿರ್ದಿಷ್ಟಪಡಿಸದೆ ತಂದಂಥ ಕಾನೂನು ಏನೂ ಪ್ರಯೋಜನವಿಲ್ಲ. ಸರ್ಕಾರ ಮೊದಲು ಎಸ್. ಸಿ., ಎಸ್. ಟಿ. ಯಾರು, ಬ್ಯಾಕ್‌ವರ್ಡ್‌ಕ್ಲಾಸ್ ಯಾರು ಎಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳದೆ ಚಿನ್ನಪ್ಪರೆಡ್ಡಿ ಆಯೋಗದ ವರದಿ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಪೂರ್ವದಲ್ಲಿ ಮಂಡಲ ಆಯೋಗದ ವರದಿ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಪೂರ್ವದಲ್ಲಿ ಯಾರಿಗೆ

ಮೀಸಲಾತಿ ಕೊಡಬೇಕು ಎಂಬುದನ್ನು ನಿರ್ಧಾರ ಮಾಡಲಿಕ್ಕೆ ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಯಾವ ಜನರಿಗೆ ಮೀಸಲಾತಿ ಸಿಗಬೇಕು ಎಂದು ನಿರ್ಧಾರ ಮಾಡದೆ ಈಗ ತಂದಿರತಕ್ಕ ಕಾನೂನು ಕೇವಲ ಹರಿಜನ ಗಿರಿಜನರ ಹಿಂದುಳಿದವರ ಮತಗಳನ್ನು ಪಡೆಯಲಿಕ್ಕೆ ಮಾಡಿರತಕ್ಕ ರಾಜಕೀಯ ಸ್ಟಂಟ್ ವಿನಹ ಅವರಿಗೆ ಅನುಕೂಲ ಸಿಗಬೇಕು ಎಂಬ ಉದ್ದೇಶ ಸರ್ಕಾರಕ್ಕಿಲ್ಲ. ಆದ್ದರಿಂದ ಮಂಡಲ ಆಯೋಗ ಮತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿ ಬಗ್ಗೆ ನಿರ್ಣಯ ತೆಗೆದುಕೊಳ್ಳದೇ ತಂದಿರುವ ಈ ಕಾನೂನು ಮದುವೆ ಇಲ್ಲದೇ ಹುಟ್ಟಿದಂಥ ಮಗು ಇದ್ದ ಹಾಗೆ. ಯಾರು ಹರಿಜನರು ಗಿರಿಜನರು ಯಾರು ಹಿಂದುಳಿದವರು ಎಂದು ನಿರ್ಧರಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗದೇ ಇರುವಾಗ ಇದನ್ನು ತಂದಿರತಕ್ಕದ್ದು ಮದುವೆ ಆಗದೆ ಹುಟ್ಟಿದ ಮಗು. ಮದುವೆ ಆಗದೆ ಮಗು ಹುಟ್ಟುವುದಕ್ಕೆ ಸಾಧ್ಯವಿಲ್ಲ. ಹುಟ್ಟಿದ ಮಗು ಅದು ಯಾರದು ಎಂದು ಹೇಳುವುದಕ್ಕೂ ಆಗುವುದಿಲ್ಲ. ಬಹುತೇಕ ಅಧಿಕಾರದಲ್ಲಿರುವ ಜನ ವೈಯಕ್ತಿಕ ಲಾಭಕ್ಕಾಗಿ ಅಧಿಕಾರಿಗಳನ್ನು ಹೆದರಿಸಿ ರಿಸರ್ವೇಷನ್ ಪಡೆಯುವುದಕ್ಕೆ ತಂದಿದ್ದು ಎಂದು ನಾನು ಭಾವಿಸುತ್ತಿದ್ದೇನೆ. ಈ ಕಾನೂನಿನಿಂದ ಯಾವ ಪ್ರಯೋಜನ ಇದೆ ? ಶಿಕ್ಷೆ, ದಂಡ ಮಾಡುವುದಕ್ಕೆ ಅಧಿಕಾರಿಗಳಿಗೆ ಹೋಗಬೇಕು ಅಧಿಕಾರಿಗಳು ನಿಮ್ಮ ಕೈಯಲ್ಲಿದ್ದಾರೆ. ಇದುವರೆಗೆ ಓಂಬತ್ತು ಎಷ್ಟು ಜನರಿಗೆ ಮಾಡಿದ್ದೀರಿ. ಸಾಕಷ್ಟು ಅಧಿಕಾರ ಸರ್ಕಾರಕ್ಕೆ ಇದೆ. ರಿಸರ್ವೇಷನ್ ಅನುಸರಿಸಿಲ್ಲ ಎಂದರೆ ಓಂಬತ್ತು ಮಾಡಬಹುದಿತ್ತು. ಪ್ರೊಮೋಷನ್ ಕೊಡುವುದನ್ನು ನಿಲ್ಲಿಸಬಹುದಾಗಿತ್ತು. ಇದ್ದ ಕಾನೂನನ್ನು ಯಾರೂ ಉಪಯೋಗ ಮಾಡಿಕೊಂಡಿಲ್ಲ. ರಿಸರ್ವೇಷನ್ ಸದುಪಯೋಗ ಮಾಡುವ ಮನಸ್ಸು ಸರ್ಕಾರಕ್ಕೆ ಇಲ್ಲ. ಕೇವಲ ಕಣ್ಣೊರೆಸುವ ತಂತ್ರ, ರಾಜಕೀಯ ದುರುದ್ದೇಶದಿಂದ ಇದನ್ನು ತಂದಿದ್ದಾರೆಯೇ ವಿನಹ ನಿಜವಾದ ಕಳಕಳಿ ಬಡ ಜನರ ಬಗ್ಗೆ ಹರಿಜನ ಗಿರಿಜನರ ಬಗ್ಗೆ ಇಲ್ಲ. ಆದ್ದರಿಂದ ಇದನ್ನು ನಾನು ವಿರೋಧ ಮಾಡದೇ ಇದ್ದರೂ ಇದು ತಂದಂಥ ಉದ್ದೇಶ ಸರಿಯಾಗಿಲ್ಲ. ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಹಲವಾರು ವರ್ಷಗಳಿಂದ ಹಿಂದೂ ಸಮಾಜದಲ್ಲಿ ಇಂತಹ ಹಾಗೂ ಯಾವ ಸಮಾಜವನ್ನು ನಾವು ಇಲ್ಲಿಯವರೆಗೆ ಒಂದು ವಿಶೇಷವಾದಂಥ ಅವಕಾಶ ಕಲ್ಪಿಸಲಿಕ್ಕೆ ಪ್ರಯತ್ನಪಡುತ್ತಾ ಬಂದಿದ್ದೇವೆ ಆ ದೃಷ್ಟಿಯಿಂದ ಇಲ್ಲಿ ತಂದಂಥ ಕಾನೂನನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಎಲ್ಲಾ ಸಂಸ್ಥೆಗಳಲ್ಲೂ ಕೂಡ ಈ ಮೀಸಲಾತಿ ಕಡ್ಡಾಯವಾಗಿ ಅನುಷ್ಠಾನಕ್ಕೆ ತರದೇ ಹೋದರೆ ಇದಕ್ಕಿಂತ ಪ್ರಖರವಾದ ಕಾನೂನನ್ನು ನಾವು ತರಬೇಕಾಗುತ್ತದೆ. ಇಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಕೂಡ ಈ ಒಂದು ಹಿಂದುಳಿದ ಸಮಾಜಕ್ಕೆ ಹಾಗೂ ಸಮಾಜದಲ್ಲಿ ಇಲ್ಲಿಯವರೆಗೆ ಯಾವ ಸಮಾಜವನ್ನು ಕೆಲವು ವಿಷಯಗಳಿಂದ ದೂರ ಇಟ್ಟಿದ್ದೇವೆ ಆ ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಾಗ, ಯಾವ ಅಭ್ಯರ್ಥಿಗಳ ಆರ್ಥಿಕ ಗುಣಮಟ್ಟ ಸರಿಯಾದ ಪರಿಸ್ಥಿತಿಯಲ್ಲಿ ಇರುವುದಿಲ್ಲ ಅಂಥ ಕೆಲವೊಂದು ಅಭ್ಯರ್ಥಿಗಳು ಸಂದರ್ಶನಕ್ಕೆ ಹೋದಮೇಲೆ ಅಲ್ಲಿ ಇರತಕ್ಕ ಬೇರೆ ಸಮಾಜದ ಅಭ್ಯರ್ಥಿಗಳು ಹಿಂದುಳಿದ ಸಮಾಜದ ಅಭ್ಯರ್ಥಿಗೆ ದುಡ್ಡು ಕೊಟ್ಟು, ದಯಮಾಡಿ ಇವತ್ತು ಸಂದರ್ಶನಕ್ಕೆ ಬರಬೇಡಿ ನಮಗೆ ಅವಕಾಶ ಮಾಡಿಕೊಡಿ ಎಂದು ಹೇಳಿರುವುದನ್ನು ಕೆಲವೊಂದು ಸಾರಿ ನಾವು ನೋಡಿದ್ದೇವೆ. ಇವತ್ತಿನ ಕಾನೂನಿನ ಚೌಕಟ್ಟಿನಲ್ಲಿ ನೇಮಕಾತಿ ವಿಷಯಗಳನ್ನು ಸರ್ಕಾರದವರು ಏನು ತರುತ್ತಿದ್ದಾರೆ ಇದರಲ್ಲಿ ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳಿರಬಹುದು ಅಥವಾ ಇನ್ನುಳಿದ ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿ ಇರಬಹುದು ಅಥವಾ ಇನ್ನೂ ಹಲವಾರು ಔದ್ಯೋಗಿಕ ಸಂಸ್ಥೆಗಳಲ್ಲಿ ಕೂಡ ಕಡ್ಡಾಯವಾಗಿ ನಾವು ಮಾಡಬೇಕಾಗುತ್ತದೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ ಮಾಡುತ್ತಿದ್ದೇನೆ. ಕರ್ನಾಟಕದಲ್ಲಿ ಔದ್ಯೋಗಿಕ ಘಟಕಗಳಿಗೆ ತಾವು ಏನು ಲೈಸೆನ್ಸ್ ಕೊಟ್ಟಿದ್ದೀರಿ ಅಥವಾ ಕೊಡುತ್ತಿದ್ದೀರಿ ಅಂಥ ಕಡೆ ಕೂಡ ಪರಿಶಿಷ್ಟ ಸಮಾಜದ ಅಭ್ಯರ್ಥಿಗಳ ನೇಮಕಾತಿಗೆ ಕಡ್ಡಾಯಗೊಳಿಸಬೇಕಾಗುತ್ತದೆ.

5–45 ಪಿ. ಎಂ.

ಇದು ಬರೀ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಲ್ಲ. ಔದ್ಯೋಗಿಕ ಘಟಕಗಳಲ್ಲಿ ಕೂಡ ನಾವು ಈ ಮೀಸಲಾತಿಯನ್ನು ಅನುಷ್ಠಾನ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ನಾನು ಇಲ್ಲಿ ವ್ಯಕ್ತ ಮಾಡುತ್ತಿದ್ದೇನೆ. ಸ್ಥಾಯೀ ಸಮಿತಿ ರಚನೆ ಸರಕಾರದಿಂದ ನಡೆಯುತ್ತಿದೆ. ಮಾನ್ಯ ದೇಶಪಾಂಡೆಯವರು ಹೇಳಿದ ಪ್ರಕಾರ ಇಂತಹ ರಾಜ್ಯಮಟ್ಟದ ಸ್ಥಾಯೀ ಸಮಿತಿಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ವಿಧಾನ ಸಭೆಯಿಂದ 5 ಜನ ಸದಸ್ಯರನ್ನು ಹಾಕಿದ್ದೀರಿ ವಿಧಾನ ಪರಿಷತ್ತಿನಿಂದ ಕೂಡ ಕೊನೆಯ ಪಕ್ಷ ಇಬ್ಬರು ಸದಸ್ಯರು ಇರಬೇಕೆಂಬ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಇನ್ನು ಸ್ಥಾಯಿ ಸಮಿತಿಯ ಕಾರ್ಯ ವ್ಯಾಪ್ತಿ ವರ್ಷದಲ್ಲಿ ಎರಡು ಸಲವೆಂದು ಹೇಳಿದ್ದೀರಿ ಇದು ಸರಿಯಾದಂತಹ ವ್ಯವಸ್ಥೆಯಲ್ಲ. ಕೊನೇ ಪಕ್ಷ 3 ತಿಂಗಳಿಗೊಮ್ಮೆಯಾದರೂ ಈ ಸಭೆ ಸೇರಬೇಕು. ಇದಕ್ಕೆ ಬರತಕ್ಕಂತಹ ಆರ್ಥಿಕ ವೆಚ್ಚ ಏನು ಇದೆ ಅದಕ್ಕೆ 6 ಸಾವಿರ ರೂಪಾಯಿಗಳವರೆಗೆ ಮಾತ್ರ ಎಂದು ಮಾಡಿದ್ದೀರಿ ಇದು ಸರಿಯಾದಂತಹ ವ್ಯವಸ್ಥೆಯಲ್ಲ. ಅವರು ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿ ಏನು ಇದೆ ಬೇರೆ ಬೇರೆ ಪ್ರದೇಶದಲ್ಲಿ ಏನು ಇದೆ ಎಂಬುದನ್ನು ನೋಡಬೇಕಾಗುತ್ತದೆ. ಈ ತಿದ್ದುಪಡಿಯನ್ನು ಇಲ್ಲಿ ತರಬೇಕಾಗುತ್ತದೆ. ಇನ್ನು ಈ ಸ್ಥಾಯಿ

ಸಮಿತಿಯ ಕಾರ್ಯ ವ್ಯಾಪ್ತಿಯಲ್ಲಿ ಮೀಸಲಾತಿಯನ್ನು ಅಪಾಯಿಂಟ್‌ಮೆಂಟ್‌ನಲ್ಲಿ ತರುವಾಗ ಕೆಲವೊಂದು ತೊಂದರೆ ಅಥವಾ ಅಲ್ಲಿ ಸಂದರ್ಭಾನುಸಾರ ಕೆಲಸ ಮಾಡುವಾಗ ಕೆಲವೊಂದು ವಿಚಾರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಇಲ್ಲಿಯವರೆಗೆ ಯಾವ ಸಂಸ್ಥೆಗಳಲ್ಲಿ ಈ ಒಂದು ಮೀಸಲಾತಿಯನ್ನು ಅನುಷ್ಠಾನ ಮಾಡಿಲ್ಲ ಅಂತಹ ಸಂಸ್ಥೆಗಳ ಮೇಲೆ ಕಡ್ಡಾಯವಾಗಿ ಕಾನೂನಿನ ಬಂಧನವನ್ನು ತರಬೇಕಾಗುತ್ತದೆ. ಅದು ಶಿಕ್ಷಣ ಸಂಸ್ಥೆ ಇರಬಹುದು ಅಥವಾ ಸರಕಾರಿ ಅಧಿಕಾರಿಗಳಿಂದ ನೇಮಕಾತಿಯಾದಂತಹ ವಿಷಯ ಇರಬಹುದು. ಇವರಿಗೆ ಈಗ ದಂಡವನ್ನು ವಿಧಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. 1 ಸಾವಿರ ರೂಪಾಯಿ ದಂಡ ಹಾಕಬಹುದು. ಆದರೆ ಇಷ್ಟನ್ನು ಮಾಡಿದರೆ ಮಾತ್ರ ಸಾಲದು. ಈ ಸಂಸ್ಥೆಗಳು ಏನಾದರೂ ತಪ್ಪು ಮಾಡಿದರೆ ಆ ಸಂಸ್ಥೆಗಳಿಗೆ ಕೊಟ್ಟಂತಹ ಪರವಾನಗಿಯನ್ನು ರದ್ದು ಮಾಡಬೇಕಾಗುತ್ತದೆ. ಇಲ್ಲದಿದ್ದರೆ 1 ಸಾವಿರ ರೂಪಾಯಿಗಳ ದಂಡವನ್ನು ಯಾವನೋ ತುಂಬುವುದು ಯಾವನೋ ಮಾಡಿದ ಎಂದು ಹೇಳುವುದು ಆಗುತ್ತದೆ. ಇದನ್ನು ಹೇಳಿಕೊಂಡು ಘೋರಾಗತಕ್ಕಂತಹ ಸಂದರ್ಭ ಬರಬಹುದು. ಸ್ಥಾಯಿ ಸಮಿತಿಗೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರಿರಬೇಕು ಮಾನ್ಯ ಸಮಾಜ ಕಲ್ಯಾಣ ಸಚಿವರೂ ಕೂಡ ಅಲ್ಲಿ ಸದಸ್ಯರಾಗಿರಬೇಕು. ಈ ಕಾನೂನು ಒಳ್ಳೆಯದಿದ್ದರೂ ಕೂಡ ಇದರಿಂದ ಕೆಲವು ತೊಂದರೆಗಳಾಗಬಹುದು. ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಬನ್ನಿಕೋಡ್‌ರವರು ಹೇಳಿದ ಪ್ರಕಾರ ಹಳ್ಳಿಗಾಡು ಪ್ರದೇಶದಲ್ಲಿರತಕ್ಕಂತಹ ಹಿಂದುಳಿದ ವರ್ಗದವರು ಏನು ಇದ್ದಾರೆ ಆರ್ಥಿಕ ಮುಗ್ಗಟ್ಟಿನಲ್ಲಿ ಏನು ಇದ್ದಾರೆ ಅಂತಹವರನ್ನು ಕೂಡ ವಿಶೇಷ ಸಂದರ್ಭವೆಂದು ಭಾವಿಸಿ ಅವರಿಗೂ ಕೂಡ ನೇಮಕಾತಿಯ ವ್ಯವಸ್ಥೆ ಮಾಡುವುದು ಒಳ್ಳೆಯದು. ಮಾನ್ಯ ಶಿವಣ್ಣನವರು ಹಳ್ಳಿಗಾಡು ಪ್ರದೇಶದಿಂದ ಬಂದವರು. ವಿಶೇಷವಾಗಿ ಮೀಸಲಾತಿ ಪಡೆದಂತಹ ಜನರಿಗೇ ಮೀಸಲಾತಿ ಹೋಗಬಾರದು. ಅನ್ನತಕ್ಕಂತಹ ಅಭಿಪ್ರಾಯ ನನ್ನದು ಇದೆ. ಆ ದೃಷ್ಟಿಯಿಂದ ಕಾನೂನಿನಲ್ಲಿ ಬದಲಾವಣೆ ಮಾಡಬೇಕು. ಮತ್ತು ಸ್ಥಾಯಿ ಸಮಿತಿಗೆ ಸದನದ ಸದಸ್ಯರಷ್ಟೇ ಅಲ್ಲದೆ ಸಮಾಜದಲ್ಲಿ ಹಲವಾರು ಜನ ಸಾಮಾಜಿಕ ಕಾರ್ಯ ಮಾಡಿದಂತ ಜನರೇನಿದ್ದಾರೆ ಅವರಲ್ಲಿ ಕೊನೇ ಪಕ್ಷ ಒಂದು ಡಿವಿಜನ್‌ಗೆ ಒಬ್ಬರನ್ನಾದರೂ ಸ್ಥಾಯಿ ಸಮಿತಿಗೆ ನೇಮಕ ಮಾಡಬೇಕು. ಈ ಅಭಿಪ್ರಾಯಗಳನ್ನು ವ್ಯಕ್ತ ಮಾಡಿ ಈ ಕಾನೂನನ್ನು ತಾವು ಹೊಸ ಅಧ್ಯಾಯವನ್ನು ಇಲ್ಲಿ ಪ್ರಾರಂಭ ಮಾಡುತ್ತಿದ್ದೀರಿ ಅದೇ ರೀತಿ ಇಲ್ಲಿ ಯಾರು ತಪ್ಪು ಮಾಡುತ್ತಾರೆ ಅಂತಹವರ ಮೇಲೆ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಯಾರು ತಪ್ಪು ಮಾಡುತ್ತಾರೆ ಅಂತಹವರ ಇಲ್ಲವೇ ಅಂತಹ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸುವುದಾಗಲೀ ಅಥವಾ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡತಕ್ಕಂತಹ ಇಂಡಸ್ಟ್ರೀಯ ಲೈಸನ್ಸ್ ಅನ್ನು ರದ್ದು ಮಾಡುವುದಾಗಲೀ ಸರಕಾರಿ ಅಧಿಕಾರಿಗಳೇ ತಪ್ಪು ಮಾಡಿದರೂ ಕೂಡ ಅವರನ್ನು ಮನೆಗೆ ಕಳಿಸುವಂತಹ ಕಾರ್ಯಕ್ರಮವನ್ನು ತರಬೇಕಾಗುತ್ತದೆ. ಇದನ್ನು ಮಾಡದಿದ್ದರೆ ಮತ್ತೊಂದುಸಲ ಈ ಕಾನೂನಿಗೆ ತಿದ್ದುಪಡಿ ತರತಕ್ಕಂತಹ ಅವಶ್ಯಕತೆ ಬರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿ ಮತ್ತೊಂದು ಸಲ ಈ ಕಾನೂನನ್ನು ಸ್ವಾಗತ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ :– ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸಭೆಯಲ್ಲಿ ಡಾ. ತಿಪ್ಪೇಸ್ವಾಮಿಯವರು ಒಂದು ಮೀಸಲಾತಿಯ ಸಲುವಾಗಿ ಒಂದು ಬಿಲ್ಲನ್ನು ತಂದಿದ್ದರು. ಯಾರು ಈಗಾಗಲೇ ಮೀಸಲಾತಿ ಸೌಲಭ್ಯವನ್ನು ಪಡೆದಿದ್ದಾರೆ ಅವರು ಈ ಸೌಲಭ್ಯವನ್ನು ಮತ್ತೆ ತಿರುಗಿ ಪಡೆಯಬಾರದು ಎಂದು ಮಾನ್ಯ ಬನ್ನಿಕೋಡ್‌ರವರು ಸಜೆಸ್ಟ್ ಮಾಡಿದ ಪ್ರಕಾರ ಈಗಾಗಲೇ ಯಾರು ಆರ್ಥಿಕವಾಗಿ ಮುಂದಿದ್ದಾರೆ ಜೀವನದಲ್ಲಿ ಒಳ್ಳೆಯ ಸ್ಥಾನದಲ್ಲಿದ್ದಾರೆ ಅವರಿಗೆ ಇಂತಹ ಮೀಸಲಾತಿ ಸೌಲಭ್ಯವನ್ನು ನೀಡುವುದು ಸರಿಯಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಕೂಡ ಆಗಿದೆ. ಈಗಾಗಲೇ ತಂದಂಥ ಕಾಯಿದೆ ನಿರುಪಯುಕ್ತವಾದ ಕಾಯಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಪ್ರತಿಯೊಂದು ಇನ್‌ಸ್ಟಿಟ್ಯೂಷನ್‌ನಲ್ಲಿ ಇವತ್ತಿನ ದಿವಸ ಮೀಸಲಾತಿ ಪ್ರಕಾರ ಅಪಾಯಿಂಟ್‌ಮೆಂಟ್ ಆಗಿದೆಯೋ ಇಲ್ಲವೋ ಎಂದು ನೋಡುವಂಥ ಪದ್ಧತಿ ಇದೆ. ಅಂದರೆ ಅಪಾಯಿಂಟ್‌ಮೆಂಟ್ ಸರಿಯಾಗಿ ಆಗದೇ ಇದ್ದರೆ ಆ ಅಪಾಯಿಂಟ್‌ಮೆಂಟ್ ಅಪ್ರೂವಲ್ ಕೂಡ ಕೊಡುವುದಿಲ್ಲ. ಅಂಥದಿರುವಾಗ ಇಂಥದ್ದೊಂದು ತಂದು ಆಗಿದೆಯೇ ಇಲ್ಲವೇ ಎಂದು ವಿಚಾರ ಮಾಡುವ ಅವಶ್ಯಕತೆ ಏನು ? ವಿಧಾನ ಮಂಡಲದಲ್ಲಿ ಎಸ್. ಸಿ. ಎಸ್.ಟಿ. ಕಮಿಟಿ ಇದೆ. ಇವರೂ ಸಹ ಪ್ರತಿ ವರ್ಷ ಇವುಗಳನ್ನು ರಿವ್ಯೂ ಮಾಡುತ್ತಾರೆ. ಇಂಥದ್ದಿದ್ದಾಗ ಮತ್ತೊಂದು ಕಮಿಟಿ ಏತಕ್ಕೆ ಬೇಕು ? ಮಾನ್ಯ ವೀರಪ್ಪ ಮೊಯಿಲಿಯವರೂ ಸಹಿತ ಇಲ್ಲಿ ಹಾಜರಿದ್ದಾರೆ. ಯಾವುದೇ ಹೈಸ್ಕೂಲ್‌ನಲ್ಲಿ, ಯೂನಿವರ್ಸಿಟಿಯಲ್ಲಿ, ಕಾಲೇಜಿನಲ್ಲಿ 8 ಪೋಸ್ಟ್‌ಗಳಿದ್ದರೆ ಒಂದು ಹಿಂದಿ, ಒಂದು ಇಂಗ್ಲೀಷ್, ಒಂದು ಸಂಸ್ಕೃತ, ಹೀಗೆ ಒಂದೊಂದು ಪೋಸ್ಟ್ ಇದ್ದರೆ ಎಲ್ಲಾ ಎಸ್. ಸಿ. ಎಸ್.ಟಿ. ಗೆ ರಿಸರ್ವ ಎಂದು ಮಾಡಿದರೆ ಅದು 18 ಪರ್ಸೆಂಟ್ ರಿಸರ್ವೇಷನ್ ಬರುವುದಿಲ್ಲ. ಒಂದೇ ಸಂಸ್ಕೃತ, ಒಂದೇ ಇಂಗ್ಲೀಷ್, ಒಂದೇ ಕನ್ನಡ, ಒಂದೇ ಹಿಸ್ಟರಿ, ಒಂದೇ ಜಾಗ್ರಫಿ ಹೀಗೆ 8 ಪೋಸ್ಟ್‌ಗಳಿದ್ದರೆ ಅದು ತುಂಬುವುದಿದ್ದಾಗ 8 ಪೋಸ್ಟ್‌ಗಳ ನೋಟಿಫಿಕೇಷನ್ 'ಎ' ಗ್ರೂಪ್ಪಿಗೆ ಆಗುತ್ತದೆಯೇ ಹೊರತು ಬೇರೆ ಗ್ರೂಪಿಗೆ ಇರುವುದಿಲ್ಲ. ಈ ಪ್ರಕಾರ ಇರುವಾಗ ಇಂಥದ್ದು ತರುವುದು ಏನಿದೆ ಎಂದು ಹೇಳಬಹುದು. ಅದೇ ಪ್ರಕಾರ ಯೂನಿವರ್ಸಿಟಿಯಲ್ಲಿ ಕೂಡ ಇದೆ. ಇನ್ನೂ ಸ್ವಲ್ಪ ದಿವಸಕ್ಕೆ ಹೋದರೆ ಎಲ್ಲಾ ಎಸ್. ಸಿ. ಎಸ್. ಟಿ. ಬಿಟ್ಟರೆ ಬೇರೆಯವರಿಗೆ ಯಾವುದೇ ನೌಕರಿ ಸಿಗುವ ಪ್ರಸಂಗ ಬರುವುದಿಲ್ಲ. ಆದಕಾರಣ ಕಾನ್‌ಸ್ಟಿಟ್ಯೂಷನ್ ಪ್ರಕಾರ, ಆಕ್ಟ್ ಪ್ರಕಾರ ಮೀಸಲಾತಿ ಎಷ್ಟು ಸಿಗಬೇಕಾ

ಗಿದೆಯೋ ಅಷ್ಟು ಕೊಡುವ ಕರ್ತವ್ಯ ಸರ್ಕಾರದ್ದೂ ಇದೆ, ನಮ್ಮದೂ ಇದೆ. ಇವತ್ತಿನ ದಿವಸ ಕೆಲವು ಮಾರ್ಪಾಡುಗಳನ್ನು ತಂದಿದ್ದಾರೆ. ಇದೊಂದು ರಿಡೆಂಡೆಂಟ್ ಆಕ್ಟ್ ಎಂದರೆ ತಪ್ಪಾಗಲಿಕ್ಕಿಲ್ಲ. ಈ ಆಕ್ಟ್‌ನಲ್ಲಿ ಬಹಳ ದೋಷಗಳಿವೆ. ಈಗಾಗಲೇ ಹಿರಿಯ ಸದಸ್ಯರಾದ ದೇಶಪಾಂಡೆಯವರು ಹೇಳಿದ್ದಾರೆ. ಆದಕಾರಣ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಪುನರ್ ಪರಿಶೀಲಿಸಬೇಕೆಂದು ನಾನು ಹೇಳುತ್ತೇನೆ.

† ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :– ಅಧ್ಯಕ್ಷರೆ, ಇದು ಬಹಳ ಪ್ರೋಗ್ರೆಸ್ಸೀವಾದ ಬಿಲ ಇದಕ್ಕೆ ಸಾಕಷ್ಟು ಸಮಯ ಆಗಿದೆ. 1982 ರಿಂದಲೇ ಈ ಬಿಲ್ ತರಬೇಕು ಎಂದು ಸ್ಟಾರ್ಟ್ ಆಗಿತ್ತು. ಅಪೋಜಿಷನ್ ಡೆಪ್ಯೂಟಿ ಲೀಡರ್ ಸಿಂಧ್ಯ ಅವರಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಅಂದರೆ ಬ್ಯಾಕ್‌ವರ್ಡ್ ಕ್ಲಾಸಸ್, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಮೈನಾರಿಟೀಸ್ ಎಂದರೆ ಬಹಳ ಇಂಟರೆಸ್ಟ್. ಅಪೋಜಿಷನ್ ಎಷ್ಟು ಬಿರುಸಿನಿಂದ ಮಾತನಾಡಿದರೆ ಅಷ್ಟು ನಮಗೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಏಕೆಂದರೆ ಅಪೊಸಿಷನ್‌ನವರು ಕ್ರಿಟಿಸೈಸ್ ಮಾಡಿದರೆ ಸರ್ಕಾರ ಅಲರ್ಟಾಗಿ ಕಾರ್ಯಕ್ರಮ ಹಾಕಿಕೊಂಡು ಹೆಚ್ಚು ಹೆಚ್ಚಾಗಿ ಜನರಿಗೆ ಲಾಭವಾಗುವಂಥ ಕೆಲಸ ಮಾಡಬಹುದು. ಇಲ್ಲಿ ಕ್ಲಿಯರಾಗಿ ಹೇಳಿದ್ದೇವೆ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ರಿಸರ್ವೇಷನ್ ಕೊಡಬೇಕು ಎಂದು. ಆದರೆ ರಿಸರ್ವೇಷನ್ ಇಲ್ಲಿಯವರೆಗೆ ಕೊಟ್ಟುಕೊಳ್ಳುತ್ತಾ ಬಂದರೂ ಕೆಲವರ ನಿರ್ಲಕ್ಷ್ಯದಿಂದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇಂಟರೆಸ್ಟ್‌ಗೆ ಅಫೆಕ್ಟ್ ಆಗಿದೆ, ಬಹಳ ಜನರಿಗೆ ದೊರೆಯತಕ್ಕ ಹಕ್ಕುಗಳು ದೊರೆಯದೆ ಅನ್ಯಾಯವಾಗಿದೆ ಎಂದು ತಿಳಿದು ಸರ್ಕಾರ ಈ ಮಸೂದೆ ತಂದಿದೆ. ಅದಲ್ಲದೆ ಕೆಲವು ಸಜೆಷನ್ಸ್ ಹೇಳಿದರು. ಯೂನಿವರ್ಸಿಟಿಯಲ್ಲಿ ಆಯಿತು, ಪಬ್ಲಿಕ್ ಸೆಕ್ಟಾರ್‌ನಲ್ಲಿ ಆಯಿತು, ಸ್ಟೇಟ್ ಗೌರ್ನಮೆಂಟ್‌ನಲ್ಲಿ ಆಯಿತು, ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಆಯಿತು ಎಂದು ಹೇಳಿದರು. ಸಾಕಷ್ಟು ಕಾರ್ಯಕ್ರಮ ಹಾಕಿಕೊಂಡು ಎಲ್ಲೆಲ್ಲಿ ರಿಸರ್ವೇಷನ್ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕೊಡಬೇಕೋ ಅದು ಕೊಡಬೇಕೆಂದು ಮಾಡಿದ್ದೇವೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟ್ ಬಂದಮೇಲೆ ಅದಕ್ಕಾಗಿ ಸ್ಟ್ಯಾಂಡಿಂಗ್ ಕಮಿಟಿ ಕೂಡ ಮಾಡಿದ್ದೇವೆ. ಕೆಲವು ಸದಸ್ಯರು ಚೀಫ್ ಮಿನಿಸ್ಟರ್ ಅದಕ್ಕೆ ಅಧ್ಯಕ್ಷರಾಗಿರಬೇಕು ಎಂದು ಹೇಳಿದರು. ಅದಕ್ಕೆ ನನಗೇನೂ ಅಭ್ಯಂತರ ಇಲ್ಲ. ಆದರೆ ಚೀಫ್ ಮಿನಿಸ್ಟರ್ ಯಾವಾಗಲೂ ನಮ್ಮ ಜೊತೆಯಲ್ಲಿರುತ್ತಾರೆ. ಆದಕ್ಕೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಇನ್ನಿತರ ಶಾಸಕರು ಕೆಲಸ ಮಾಡಿಕೊಂಡು ಹೋಗಬಹುದು.

ಶ್ರೀ ಆರ್. ವಿ. ದೇಶಪಾಂಡೆ :– ಮುಖ್ಯ ಮಂತ್ರಿಗಳಿಗೆ ಟೈಮ್ ಸಿಗುವುದಿಲ್ಲ ಎಂದು ಶಿವಣ್ಣನವರು ಹೀಗೆ ಮಾಡಿದ್ದಾರೆ.

ಶ್ರೀ ಬಿ. ಶಿವಣ್ಣ :– ಫಾರ್ಮರ್ ಲಾ ಮಿನಿಸ್ಟರ್ ಕಾಲಕ್ಕೆ ಇದು ಆಗಿದೆ. ಆದರೆ ಅದರ ಅಡ್ವಾಂಟೇಜ್ ನಾನು ತೆಗೆದುಕೊಳ್ಳುತ್ತಿದ್ದೇನೆ ಅಷ್ಟೆ. ನಾನು ಮಾಡಿದ್ದಲ್ಲ. ನಾಲ್ಕು ಜನ ಶಾಸಕರಿರಬೇಕು, ಇಬ್ಬರು ಎಂ.ಎಲ್.ಸಿ. ಇರಬೇಕು ಎಂದು ಮಲ್ಲಾರಿಗೌಡ ಪಾಟೀಲರು ಹೇಳಿದರು. ಅದೇ ಪ್ರಕಾರ ಅಮೆಂಡ್‌ಮೆಂಟ್ ಕೂಡ ಕೊಟ್ಟಿದ್ದೇನೆ. ನಾಲ್ಕು ಜನ ಶಾಸಕರು ವಿಧಾನಸಭೆಯಿಂದ, ಇಬ್ಬರು ಲೆಜಿಸ್ಲೇಟೀವ್ ಕೌನ್ಸಿಲ್‌ನಿಂದ ಇರಬೇಕು, ಅದರಲ್ಲಿ ಒಬ್ಬರು ಎಸ್. ಸಿ. ಒಬ್ಬರು ಎಸ್. ಟಿ. ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರು ಇರಬೇಕು ಎಂದು ನಂಜುಂಡಸ್ವಾಮಿಯವರು ಕೂಡ ಹೇಳಿದರು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾನು ಪ್ರತಿಯೊಂದು ಡಿವಿಜನ್‌ನಲ್ಲಿ ಸಮಾಜದಿಂದ ಒಳ್ಳೆಯ ಕೆಲಸ ಮಾಡಿರುವವರನ್ನು ಹಾಕಿ ಎಂದು ಹೇಳಿದ್ದೆ.

ಶ್ರೀ ಬಿ. ಶಿವಣ್ಣ :– ಅದು ವಿಚಾರ ಮಾಡೋಣ. ಪೆನಾಲ್ಟಿ ಬಗ್ಗೆ ಬಂದರೆ ಎಷ್ಟೇ ಸ್ಟ್ರಿಕ್ಟಾಗಿ ಮಾಡಿದರೂ ಪೆನಾಲ್ಟಿ ಇದ್ದರೆ ತಪ್ಪು ಮಾಡಿದವರಿಗೆ ಭಯ ಇರುತ್ತದೆ ಎಂದು ಮಾಡಿದ್ದೇವೆ. ನಿರಪರಾಧಿಗಳಿದ್ದು ಆಕಸ್ಮಾತ್ ತಪ್ಪಾದರೆ ಅವರಿಗೆ ಆಪೋರ್ಚುನಿಟಿ ಕೊಡಬೇಕಾಗುತ್ತದೆ. ಈ ಬಿಲ್ಲಿನ ಉದ್ದೇಶ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಸ್ಟ್ಯಾಚುಟರಿ ಸಪೋರ್ಟ್ ಮಾಡಿ ಪ್ರೊಟೆಕ್ಷನ್ ಕೊಡಬೇಕು ಲೀಗಲ್ ರೈಟ್ಸ್ ಕ್ರಿಯೇಟ್ ಮಾಡಬೇಕು ಎಂಬುದು. ದೇಶದಲ್ಲೇ ಕರ್ನಾಟಕ ಸರ್ಕಾರ ಪ್ರೋಗ್ರೆಸೀವ್ ಸರ್ಕಾರ ಎಂದು ತಿಳಿದು ಈ ಬಿಲ್ ತಂದಿದ್ದೇವೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ, 1990 ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಪರ್ಯಾಲೋಚಿಸುವುದು
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

2 ರಿಂದ 7 ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಉಪಾಧ್ಯಕ್ಷಿಣಿಯವರು:– ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 7ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು.)

ಖಂಡ 8 ಕ್ಕೆ ಮಾನ್ಯ ಮಂತ್ರಿಗಳು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನು ಮಂಡಿಸಬೇಕು.

(ಗೊಂದಲ)

Amendment to Clause 8

Sri. B. **Shivanna** :- I do hereby give notice of my intention to make the following amendments to the afore mentioned Bill, namely :-

CLAUSE—8 : In clause 8 of the Bill, for sub-clause (b) the following shall be substituted, namely :-

(b) (i) four members of the Karnataka Legislative Assembly to be nominated by the Speaker out of whom, one shall be from the Schedule Caste and one shall be from the Schedule Tribe and one shall be from the Backward Classes.

(ii) two members of the Karnataka Legislative Council to be nominated by the Chairman. Member.

Madam Dy. Speaker :- The question is .

CLAUSE : 8

That in clause 8 of the Bill, for sub–clause (b) the following shall be substituted, namely :-

(b) (i) four members of the Karnataka Legislative Assambly to be nominated by the Speaker out of whom, one shall be from the Schedule Caste and one shall be from the Schedule Tribe and one shall be from the Backward Classes.

(ii) Two members of the Karnataka Legislative Council to be nomiuated by the Chairman, Member.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಶ್ರೀ ಹೆಚ್. ಏಕಾಂತಯ್ಯ :- ಇವತ್ತು ಮಂತ್ರಿಗಳು ಏನು ತಿದ್ದುಪಡಿ ಇಟ್ಟಿದ್ದಾರೆ. ಅದನ್ನು ತತ್ವಶಃ ಒಪ್ಪಿದರೂ ಸಹ ಒಟ್ಟಿನಲ್ಲಿ 6 ಜನ ಸದಸ್ಯರನ್ನು ನೇಮಕ ಮಾಡಬೇಕೆಂದು ಹೇಳುತ್ತೀರಿ, ಆ 6 ಜನರಲ್ಲಿ ಇಂ

ಹವರೇ ಇರಬೇಕೆಂಬ ಮಾತನ್ನು ಹೇಳಿ, ವಿಧಾನ ಪರಿಷತ್ತಿನಲ್ಲಿ ಯಾರನ್ನಾದರೂ ಇಬ್ಬರನ್ನು ಕಳುಹಿಸಬಹುದೆಂದು ನೀವು ನೋಟೀಸನ್ನು ಕೊಡಿ. ಇದನ್ನೆಲ್ಲಾ ನಾವು ತಮಗೆ ಹೇಳಿಕೊಡುವುದಕ್ಕೆ ಆಗುವುದಿಲ್ಲ. **Have you sent notice ?**

(ಗೊಂದಲ)

ಉಪಾಧ್ಯಕ್ಷರು :– ತಾವೆಲ್ಲಾ ದಯವಿಟ್ಟು ಕುಳಿತುಕೊಳ್ಳಿ. ಸಂಸದೀಯ ವ್ಯವಹಾರಗಳ ಮಂತ್ರಿಗಳು, ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಉಪಾಧ್ಯಕ್ಷಿಣಿಯವರೆ, ತಿದ್ದುಪಡಿಯನ್ನು ನಾವು ಯಾವಾಗ ಸೂಚನೆ ಮಾಡಬೇಕು ? ಆ ಹಂತದಲ್ಲೇ ನಾವು ಸೂಚನೆ ಮಾಡಿದ್ದೇವೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :– ಇದು ಕರೆಕ್ಟ್ ಎಂದು ತಾವು ಹೇಳುತ್ತೀರಾ ?

ಶ್ರೀ ಎಚ್. ಏಕಾಂತಯ್ಯ :– ತಪ್ಪಾಗಿದೆ ಎಂದು ತಾವುಹೇಳುವುದಾದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನೀವು ತಪ್ಪನ್ನು ಸರಿಯೆಂದು ವಾದ ಮಾಡುವುದಾದರೆ, **you go through the proceedings.**

ಶ್ರೀ ಎಂ. ವೀರಪ್ಪ ಮೊಯಿಲಿ :– ಈಗ ಇದರಲ್ಲಿ ಎರಡು ಭಾಗ ಇದೆ. ಒಂದನೆಯ ಭಾಗ ತಿದ್ದುಪಡಿಯನ್ನು ನಾವು ಇಲ್ಲಿ ಮಂಡನೆ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇವೆ. ಈ ಸೂಚನೆ ಸನ್ಮಾನ್ಯ ಸದಸ್ಯರಿಗೆ ತಲುಪಬೇಕು.

ಶ್ರೀ ಆರ್. ವಿ. ದೇಶಪಾಂಡೆ :– ಬಂದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ :– ಇದೇನೂ ಈ ಸದನಕ್ಕೆ ಹೊಸದಲ್ಲ. ಏನಾದರೂ ಒಂದು ಸಣ್ಣ ತಿದ್ದುಪಡಿಯನ್ನು ತರಬೇಕಾದರೆ ತಮಗೆ ಗೊತ್ತಿದೆ, ಇಲ್ಲಿ ಚರ್ಚೆಯಾಗುತ್ತದೆ. ಇದನ್ನು ಇಂಟ್ರಡ್ಯೂಸ್ ಮಾಡುತ್ತೇವೆ ನಂತರ ಕನ್ಸಿಡರೇಶನ್‌ಗೆ ಬರುತ್ತದೆ. ಕನ್ಸಿಡರೇಶನ್‌ಗೆ ಬಂದಮೇಲೆ, ಚರ್ಚೆಯಲ್ಲಿ ಮಾತನಾಡುವಾಗ ವಿರೋಧ ಪಕ್ಷದಿಂದ, ಸರ್ಕಾರದಿಂದ ಇಂತಹ ಒಂದು ಅಮೆಂಡಮೆಂಟ್‌ನ್ನು ಮಾಡಬೇಕು ಎಂದು ಒಂದು ಸೂಚನೆ ಬರುತ್ತದೆ. ತತ್‌ಕ್ಷಣ ಆ ಅಮೆಂಡಮೆಂಟನ್ನು ಇಲ್ಲಿ ಮೂವ್ ಮಾಡಿದಂಥ ಪ್ರಸಂಗಗಳು ಹೊಸದೇನೂ ಅಲ್ಲ. ಶ್ರೀ ದೇಶಪಾಂಡೆಯವರೇ ತಾವು ಮಾಡಿದ್ದೀರಿ, ನಾವೂ ಮಾಡಿದ್ದೇವೆ. ಅದನ್ನು ತಾವು ಪಾಸ್ ಮಾಡುವಾಗ ಖಂಡಖಂಡವಾಗಿ ಕರೆಯುವಾಗ ಅದನ್ನು ಸೂಚನೆ ಮಾಡುತ್ತೇವೆ ಮತ್ತು ಪಾಸ್ ಮಾಡಿಕೊಳ್ಳುತ್ತೇವೆ. ಈಗ ಪ್ರಶ್ನೆ ಏನು ಬಂದಿದೆ ಎಂದರೆ, ಈ ಸೂಚನೆ ಎಲ್ಲಾ ಸದಸ್ಯರಿಗೆ ತಲುಪಿಲ್ಲ ಎಂಬುದು ತಮಗೆ ಗೊತ್ತಿದೆ, ಸಣ್ಣ ಸಣ್ಣ ತಾಂತ್ರಿಕವಾದಂಥ ಒಂದು ತಿದ್ದುಪಡಿ ಆದರೆ, ಅದನ್ನು ಮೂವ್ ಮಾಡುವ ಮೊದಲು **even if the last speaker gives suggestion, some times the Treasury Benches accept it and on the spot they move it. This has happened in this House.** ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಏಕೆಂದರೆ **Some times Ministers will have to respond instantaneously to the suggestions made by the Hon. Members.** ಇದು ಪ್ರಿಸಿಡೆಂಟ್ ಆಗಬಾರದು. ನಾವು ಮಾಡಿದ್ದಕ್ಕೆ ತಾವು ಹೇಳುತ್ತೀರಿ ಇದು ಪ್ರಿಸಿಡೆಂಟ್ ಆಗಬಾರದು ಎಂದು. ಹಾಗೆಯೇ ತಾವು ಹೇಳಿದಂಥಾದ್ದು ಪ್ರಿಸಿಡೆಂಟ್ ಆಗಬಾರದು ಎಂದು ಹೇಳಿದರೆ ಇಲ್ಲಿ ಅದನ್ನು ಕೂಡಲೇ ರೆಸ್ಪಾಂಡ್ ಮಾಡಿಕೊಂಡು **spot amendment** ಅನ್ನು ಮಾಡತಕ್ಕಂಥಾದ್ದು ಟ್ರೆಜರಿ ಬೆಂಚ್‌ಗೆ ತಕ್ಕದ್ದಲ್ಲ ಎಂದು ಹೇಳಿ ಆ ಪ್ರಿಸಿಡೆಂಟ್ ಕೂಡ ಮಾಡಿದರೆ ನಮಗೆ ಇಲ್ಲಿ ತೊಂದರೆಯಾಗುತ್ತದೆ. ಏಕೆಂದರೆ, **in that case we cannot respond to it immediately.** ಅದಕ್ಕೂ ಅವಕಾಶ ಇದೆ. ಆದರೆ ನಾನು ಒಂದನ್ನು ಒಪ್ಪುತ್ತೇನೆ. ಅದಷ್ಟು ಜಾಗ್ರತೆ ನಾವು ತಿದ್ದುಪಡಿ ನೋಟೀಸ್‌ನ್ನು ಸದಸ್ಯರಿಗೆ ಹಂಚತಕ್ಕದ್ದು ಅಪರ ತಿಳುವಳಿಕೆಗೆ ತರತಕ್ಕದ್ದು ಮತ್ತು ಅದರ ಬಗ್ಗೆ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದನ್ನು ಅಕ್ಷರಶಃ ನಾವು ಪಾಲಿಸುತ್ತೇವೆ, ಎನ್ನತಕ್ಕಂಥ ಆಶ್ವಾಸನೆಯನ್ನು ಪಾರ್ಲಿಮೆಂಟರಿ ಮಂತ್ರಿಯಾಗಿ ನಾನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ನಾವು ಇದನ್ನು ಹೆಚ್ಚು ಬೆಳೆಸದೇ ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದೆಂದು ನನ್ನ ಸೂಚನೆ.

(ಗೊಂದಲ)

ಶ್ರೀ ಎಚ್. ಏಕಾಂತಯ್ಯ :– ನಾವು ಹೇಳಿದ್ದು.......

ಉಪಾಧ್ಯಕ್ಷರು :– ಅವರು ತಮ್ಮ ಸೂಚನೆಯನ್ನು ಒಪ್ಪಿದ್ದಾರೆ.

ಶ್ರೀ ಎಚ್. ಏಕಾಂತಯ್ಯ :– ಇವತ್ತಿನ ದಿವಸ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಮಾತನ್ನು ಹೇಳಿದರೆ ಖಂಡಿತವಾಗಿಯೂ ನನಗೆ ದುಃಖವಾಗುತ್ತದೆ. ಅವರು ಯಾವಾಗ ತಿದ್ದುಪಡಿಯನ್ನು ಸಭೆಯ ಮುಂದಿಡಬೇಕು ? ತಾವು ಖಂಡ 2 ರಿಂದ 13ರ ವರೆಗೆ ವಿಧೇಯಕದ ಅಂಗೀಕಾರವಾಗಿದೆಯೆಂದು ತೀರ್ಮಾನ ಹೇಳಿದಮೇಲೆ ಅವರು ಈ ಪ್ರಸ್ತಾಪವನ್ನು ನಮ್ಮ ಮುಂದಿಟ್ಟಿದ್ದಾರೆ.

ಉಪಾಧ್ಯಕ್ಷರು :– ನೀವು ತಿದ್ದುಪಡಿ ಬಗ್ಗೆ ಮಾತನಾಡುತ್ತೀರಾ ?

ಶ್ರೀ ಎಚ್. ಏಕಾಂತಯ್ಯ :– ಹೌದು, ಮಾತನಾಡುತ್ತೇನೆ. ತಿದ್ದುಪಡಿ ಮೇಲೆ ಮಾತನಾಡುವುದಕ್ಕೆ ಮುಂಚೆ ಈ ತಿದ್ದುಪಡಿಯನ್ನು ಇವತ್ತಿನ ದಿವಸ ಸರಿಯಾದ ರೀತಿಯಲ್ಲಿ ಸರಿಯಾದಂಥ ವೇಳೆಯಲ್ಲಿ ಇದರ ಪ್ರಸ್ತಾವವನ್ನು ಸಂಬಂಧಪಟ್ಟ ಮಂತ್ರಿಗಳು ಮಂಡಿಸಿಲ್ಲ. ಈಗಾಗಲೇ ಸಭೆಯಲ್ಲಿ ಚರ್ಚೆಯಾಗಿ ಈ ವಿಧೇಯಕದ 2 ರಿಂದ 13 ಖಂಡದವರೆಗೆ ಈ ಪ್ರಸ್ತಾವಕ್ಕೆ ಅಂಗೀಕಾರವನ್ನು ಈ ಸದನ ಕೊಟ್ಟಿದೆ.

ಇದು ಕಾನೂನಿಗೆ ವಿರುದ್ಧ, ನಿಯಮಕ್ಕೆ ವಿರೋಧ. ಆದ್ದರಿಂದ ಈ ನಿಯಮಕ್ಕೆ ಏನು ತಿದ್ದುಪಡಿ ಕೊಟ್ಟಿದ್ದಾರೆ, ಇದನ್ನು ನಾನು ವಿರೋಧ ಮಾಡುತ್ತೇನೆ. ಇದು ಸರಿಯಾದ ಪ್ರವೃತ್ತಿ ಅಲ್ಲ. ಸಂಬಂಧಪಟ್ಟ ಮಂತ್ರಿಗಳು ಸಕಾಲದಲ್ಲಿ ತಿದ್ದುಪಡಿಯನ್ನು ಹೇಳಬೇಕೇ ಹೊರತು, ಅವರು ನಿದ್ದೆ ಮಾಡುತ್ತಾ ಅಥವಾ ಬೇರೆ ಬೇರೆ ವ್ಯಾಖ್ಯಾನಗಳಲ್ಲಿ ತೊಡಗಿದ್ದು, ಎಲ್ಲಾ ಆದಮೇಲೆ ಈ ಸಭೆಯಲ್ಲಿ ಹೇಳುವುದಾದರೆ, ಈ ಸಭೆಯ ಪ್ರತಿಷ್ಠೆ ಮತ್ತು ಗೌರವಗಳಿಗೆ ಧಕ್ಕೆಯಾಗುತ್ತದೆ. ಈ ರೀತಿ ಮಾಡುವುದರಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ಅದಕ್ಕಿಂತ ಹೆಚ್ಚಿಗೆ, ವಿಧಾನ ಸಭೆಯಲ್ಲಿ 4 ಜನ, ವಿಧಾನ ಪರಿಷತ್ತಿನಲ್ಲಿ 2 ಜನ ಎಂಬ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನನ್ನ ವಿರೋಧ ಇಲ್ಲ. ಆದರೆ, ಈ ಪದ್ಧತಿ ಏನಿದೆ ಇದು ಮಾತ್ರ ಸರಿಯಲ್ಲ. ಇಲ್ಲಿಂದ ಮಾತ್ರ ಇಂಥಿಂಥವರು ಇರಬೇಕು, ಅಲ್ಲಿಂದ ಯಾರು ಇರಬೇಕು ? ಇದು ಸರಿಯಾದ ರೀತಿ ಅಲ್ಲ. ಕೇವಲ ಬರೀ ಕಾಗದದ ಮೇಲೆ ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯನ್ನು ಕೊಡುತ್ತೇವೆ ಎಂಬ ಮಾತು ಮುಖ್ಯವಲ್ಲ. ಈ ದೇಶದಲ್ಲಿ ಎಲ್ಲಾ ವರ್ಗದವರಿಗೂ ನ್ಯಾಯ ದೊರೆಯಬೇಕು, ಈ ರೀತಿ ನ್ಯಾಯ ಬೆಳೆಯುವಂಥ ಪ್ರವೃತ್ತಿ ಬೇಕು. ತಾವು ಸಲಹೆ ಮಾಡಿದ್ದೀರಿ, ಇಲ್ಲ ಎನ್ನುವ ಮಾತನ್ನು ಹೇಳಲಿಲ್ಲ. ಆದರೆ ಬೇಕಾಬಿಟ್ಟಿಯಾಗಿ ಯಾವಾಗ ಏನು ಬೇಕಾದರೂ ತರಬಹುದು ಎಂಬ ಭಾವನೆ ನಿಮ್ಮಲ್ಲಿ ಇದ್ದರೆ, ಅದನ್ನು ತೀವ್ರವಾಗಿ ಖಂಡನೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ನಾನು ವಿರೋಧ ಮಾಡುತ್ತೇನೆ.

ಖಂಡ–8 ತಿದ್ದುಪಡಿಯಾದ ರೀತ್ಯ

ಉಪಾಧ್ಯಕ್ಷರು :– ತಿದ್ದುಪಡಿಯಾದ 8 ನೇ ಖಂಡವು ವಿಧೇಯಕದ ಅಂಗವಾಗಿರಬೇಕೆನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 8 ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 9 ರಿಂದ 13

ಉಪಾಧ್ಯಕ್ಷರು :– ಖಂಡ 9 ರಿಂದ 13 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 9 ರಿಂದ 13 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ :– ಇನ್ನೂ ಎರಡು ಚಿಕ್ಕ ಬಿಲ್ಲುಗಳು ಇವೆ. ಅದರಲ್ಲಿ ಒಂದು 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದು.
1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು, ಸರ್ಕಾರವು ಹಿಂದಕ್ಕೆ ತೆಗೆದುಕೊಳ್ಳಲು ಬಯಸುತ್ತದೆ ಎಂಬುದನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಪ್ರಸ್ತಾವದ ಅಂಗೀಕಾರ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳ ಪರವಾಗಿ) :– 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಅಂಗೀಕರಿಸುವುದು.

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮೋದನೆ ನೀಡಲಾಯಿತು.

ಪರ್ಯಾಲೋಚನಾ ಪ್ರಸ್ತಾವ

1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ)(ತಿದ್ದುಪಡಿ) ವಿಧೇಯಕ

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) (ಸಾರಿಗೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) (ಸಾರಿಗೆ ಮತ್ತು ವಕ್ಫ್ ಮಂತ್ರಿಗಳ ಪರವಾಗಿ) :– ಮಾನ್ಯ ಉಪಾಧ್ಯಕ್ಷರೆ, ಇದು ತುಂಬಾ ಸರಳವಾದ ಒಂದು ತಿದ್ದುಪಡಿ ವಿಧೇಯಕ. ಮ್ಯಾಕ್ಸಿ ಕ್ಯಾಬ್‌ಗೆ ಮೊದಲಿನಿಂದಲೂ ಪರ್ಮಿಷನ್ ಕೊಟ್ಟಿದ್ದೇವೆ. ಆದರೆ ಕಾಂಟ್ರಾಕ್ಟ್ ಕ್ಯಾರೇಜಸ್ ಅಕ್ವಿಜಿಷನ್ ಆಕ್ಟ್ 1976 ರ ಪ್ರಕಾರ 6 ಜನ ಪ್ಯಾಸೆಂಜರ್ಸ್‌ಗಿಂತ ಹೆಚ್ಚಾಗಿ ನಾವು ಅನುಮತಿ ಕೊಡುವುದಕ್ಕೆ ಆಗುತ್ತಿರಲಿಲ್ಲ. 12